ಜನಪದ ವಿಚಾರ

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೬ ಸೆಪ್ಟಂಬರ್ -೨೦೦೫ ಸಂಚಿಕೆ-೨



ಪ್ರತಿಗಾಮಿ ಶಿಕ್ಷಣ ಪದ್ಧತಿಗೆ ಕೊನೆ ಯಾವಾಗ?

೧)ಪ್ರತಿಗಾಮಿ ಪದ್ಧತಿಗೆ ಕೊನೆ ಯಾವಾಗ? ಪುಟ–೩

–ಸುರೇಂದ್ರ ಕೌಲಗಿ.

ಶಿಕ್ಷಣಕ್ಕೊಂದು ಶಕ್ತಿ ಇದೆ. ಈ ಶಕ್ತಿಯನ್ನು ಉಪಯೋಗಿಸಿಕೊಳ್ಳಲು ಎಲ್ಲ ದೇಶಗಳು ತಮ್ಮದೇ ಆದರೀತಿಯಲ್ಲಿ ಪ್ರಯತ್ನಿಸುತ್ತಿವೆ. ಅದರೆ ದುರ್ದೈವದ ಸಂಗತಿಯೇನೆಂದರೆ ಶಕ್ತಿಯುತವಾದ ಈ ಶಿಕ್ಷಣ ಮಾನವಕುಲಕ್ಕೆ ವರವಾಗುವುದರ ಬದಲು ಶಾಪವಾಗುತ್ತಿದೆ. ಶಿಕ್ಷಕರ ದಿನಾಚರಣೆಯ ಸಂದರ್ಭದಲ್ಲಿ ಈಲೇಖನ ಶಿಕ್ಷಣ ಪ್ರೇಮಿಗಳನ್ನು ಚಿಂತನೆಗೆ ಹಚ್ಚುತ್ತದೆ.

೨)ಶಿಕ್ಷಣವೃತ್ತಿಗೆ ಗೌರವ ತಂದ ಗಳಗನಾಥ. ಪುಟ–೬

–ಶ್ರೀನಿವಾಸ ಹಾವನೂರ.

ಕನ್ನಡ ಭಾಷಾಪ್ರೇಮಿಗಳಿಗೆ ಗಳಗನಾಥರ ಹೆಸರು ಚಿರಪರಿಚಿತ. ಅವರು ಹಲವಾರು ಕಾದಂಬರಿಗಳನ್ನು ಬರೆದು ಕನ್ನಡ ಭಾಷೆಯ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದಾರೆ. ಅವರು ಶಿಕ್ಷಕರಾಗಿಯೂ ತಮ್ಮ ಶಿಕ್ಷಣಪ್ರೇಮವನ್ನು ಮೆರೆದಿದ್ದಾರೆ. ಶಿಕ್ಷಕರ ದಿನಾಚರಣೆಯ ಉಷಃಕಾಲದಲ್ಲಿ ಸ್ಮರಿಸಿಕೊಳ್ಳಬೇಕಾದ ಹೆಸರು ಗಳಗನಾಥರದು.

೩) ಒಂದು ಮಾನವೀಯ ಆತ್ಮದ ನೋವು. ಪುಟ–೧೧

–ಕೆ. ಜೆ. ಸಾಯದೀನ್.

ದೇಶದ ವಿಭಜನೆ ಮತ್ತು ಶಿಕ್ಷಣಕ್ಷೇತ್ರದಲ್ಲಿಯ ದುರ್ದೆಸೆ ಇತ್ಯಾದಿ ವಿಚಾರಗಳನ್ನು ಕುರಿತು ಓರ್ವ ಭಾವುಕ ವ್ಯಕ್ತಿಯೊಬ್ಬರ ಆತ್ಮರೋದನ ಈ ಲೇಖನದಲ್ಲಿದೆ.

೪)ಕಣ್ಮರೆಯಾದ ರಚನಾತ್ಮಕ ಕಾರ್ಯಕರ್ತ ಶ್ರೀನಿವಾಸ್‌ರವರ ಸ್ಮರಣೆ. ಪುಟ–೧೬

–ಸತ್ಯವ್ರತ.

ರಚನಾತ್ಮಕ ಕಾರ್ಯದ ಮಹತ್ವ ಕಡಿಮೆಯಾಗಿರುವ ಈ ಕಾಲದಲ್ಲಿ ಇನ್ನು ರಚನಾತ್ಮಕ ಕಾರ್ಯಕರ್ತರನ್ನು ಯಾರು ತಾನೆ ಸ್ಮರಿಸುತ್ತಾರೆ? ಆದರೆ ಸುದೈವವಶಾತ್ ರಚನಾತ್ಮಕ ಕಾರ್ಯಕರ್ತರಲ್ಲಿ ಹಿರಿಯರಾದ ಸತ್ಯವ್ರತರು ಈ ಲೇಖನದಲ್ಲಿ ಇತ್ತೀಚೆಗೆ ನಮ್ಮನ್ನಗಲಿದ ರಚನಾತ್ಮಕ ಕಾರ್ಯಕರ್ತರನ್ನು ಸ್ಮರಿಸಿದ್ದಾರೆ.

೫)ಹಕ್ಕಿ ಹಾರುತಿದೆ ನೋಡಿದಿರಾ.... ಪುಟ–೨೦

–ಹಾಲ್ದೊಡ್ಡೇರಿ ಸುಧೀಂದ್ರ.

ಆಧುನಿಕ ತಂತ್ರಜ್ಞಾನದ ಕ್ಷೇತ್ರದಲ್ಲಿ ಹಾರುವ ಲೋಹದ ಹಕ್ಕಿಗಳಾದ ವಿಮಾನಗಳನ್ನು ಕಕ್ಷೆಗೆ ತೂರಿಬಿಡಲು ಎಷ್ಟೆಲ್ಲ ಸನ್ನಾಹ, ಎಂತಹ ಯಂತ್ರಕೌಶಲವನ್ನು ಅಡಕಗೊಳಿಸಲಾಗುವುದೆಂಬುದರ ಬಗ್ಗೆ ಕಿರು ಚಿತ್ರಣವನ್ನು ಈ ಲೇಖನ ನೀಡುತ್ತದೆ.

೬) ದ್ವಂದ್ವಗ್ರಸಿತ ಶಿಕ್ಷಣ ಪುಟ–೨೪

–ಸತ್ಯವ್ರತ.

ಇಂದಿನ ಶಿಕ್ಷಣ ವ್ಯವಸ್ಥೆಯನ್ನು ಅವಲೋಕಿಸಿದರೆ ಸಾಕಷ್ಟು ಲೋಪ– ದೋಷಗಳಿಂದ ಇಡೀ ಶಿಕ್ಷಣಯಂತ್ರ ಗ್ರಸ್ತವಾಗಿರುವಂತೆ ತೋರುವುದು ಸತ್ಯ. ಈ ಲೇಖನವು ದೇಶದ ಮಹಾನ್ ಚಿಂತಕರ ಚಿಂತನೆಯ ಹಿನ್ನೆಲೆಯಲ್ಲಿ ಸೂಕ್ಷ್ಮವಾಗಿ ದೇಶದ ಶಿಕ್ಷಣ ವ್ಯವಸ್ಥೆಯನ್ನು ನಿರುಕಿಸುತ್ತದೆ.

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಸೆಪ್ಟಂಬರ್-೨೦೦೫

ಸಂಪುಟ-೬

ಸಂಚಿಕೆ-೨

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ

ಜನಪದ ಸೇವಾ ಟ್ರಸ್ಟ್

ಧರ್ಮದರ್ಶಿ ಮಂಡಳಿ

ಚಂದಾ ವಿವರ

ವಾರ್ಷಿಕ : ರೂ ೧೦೦/-

ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ

ಜನಪದ ಸೇವಾ ಟ್ರಸ್ಟ್(ರಿ)

ಮೇಲುಕೋಟೆ-೫೭೧ ೪೩೧

ಮಂಡ್ಯ ಜಿಲ್ಲೆ

✆(08236)298754

e-mail-janapada@yahoo.com

www.janapada.org

ದೇವರು ಎಲ್ಲಿ?

ನೀವೇ ಹೇಳುವಿರಿ
ದೇವರು ಇದಾನೆ ಎಲ್ಲೆಲ್ಲೂ
ಅವನು ಸರ್ವಾಂತರ್ಯಾಮಿ ಎಂದು.
ಮತ್ತೆ ನೀವೇ ಕೇಳುವಿರಿ ದೇವರು ಎಲ್ಲಿ? ಎಲ್ಲಿ?
ನಿಮ್ಮದೇ ನಂಬಿಕೆ! ನಿಮ್ಮದೇ ಪ್ರಶ್ನೆ! ಯಾವ
ಮರುಳು ನಿಮಗೆ?
ನಾನು ಕೇಳುವೆ ದೇವರು ಎಲ್ಲಿಲ್ಲ?
ನನ್ನಲ್ಲು, ನಿಮ್ಮಲ್ಲು, ಎಲ್ಲೆಲ್ಲೂ ಇದಾನೆ.
ಅವನು ಅತಿ ಸೂಕ್ಷ್ಮ, ಅತಿ ಸ್ಥೂಲ,
ನಮ್ಮ ಈ ಹೊರಗಣ್ಣು ಒಂದು ಬರಿಯ ಸಾಧನ.
ಅದಕೆಂತು ಕಾಣುವುದು ಮಾಯೆಯ ಭವ್ಯ ಕೌತುಕ?
ಕಾಣದ್ದನ್ನು ಹುಡುಕುವುದು ನಮ್ಮ ಪೇಚು
ಇಲ್ಲದ್ದನ್ನು ಬಯಸುವುದು ನಮ್ಮ ಗೀಳು
ನಿಮ್ಮ ಅಂತರಂಗವ ನೀವೇ ಪರೀಕ್ಷಿಸಿ
ವೇದ್ಯವಾಗುವುದು ದೇವರೆಂಬ ಗುಟ್ಟು
ಭಕ್ತಿಯಲಿ, ಜ್ಞಾನದಲಿ ಇಡುಮುಂದೆ ಒಳಹೆಜ್ಜೆ
ಜೀವಕೋಶಗಳೆಲ್ಲಾ ನಿರ್ಗುಣೀ ಅವಿನಾಶಿ ಚುಕ್ಕಿ
ಜೀವಿಗಳೆಲ್ಲಾ ಜೀವಕೋಶಗಳ ಸರಿಸಂತೆ.
ನಮ್ಮ ಶರೀರದೊಳಗಿನಸಂಘಟನೆಗಳೆಲ್ಲಾ
ಜೀವಕೋಶಗಳ ಅಭಿವ್ಯಕ್ತ ರೂಪಗಳ
ಅತಿಶಯದ ಮಾಲೆ
ಅಭಿವ್ಯಕ್ತಿಗಳಿಗುಂಟು ಜೀವದ ಛಾಯೆ ಮಾತ್ರ,
ಅಂಗಾಂಗಗಳಿಗುಂಟು ರೂಪ, ಕ್ರಿಯಾಸ್ವಾತಂತ್ರ್ಯಮಿತಿ.
ಅವಕಿದೆ ಅನುಪಮ ಸಾಮೂಹಿಕ
ನಿಯಂತ್ರಣಾ ಶಕ್ತಿ ಪರಸ್ಪರತೆಯಲ್ಲಿ
ಆ ಶಕ್ತಿಯ ಆಳುವ ಅರಿಯಲಾಗದ ನಾವು
ದೇವರೆಲ್ಲಿ ದೇವರೆಲ್ಲಿಹನೆಂದು ಕೂಗುತಿಹೆವು.
ಕೋಟ್ಯಂತರ ಜೀವಕೋಶಗಳ ಗುಹ್ಯ
ರಹಸ್ಯವ ನೀವೇ ಕಂಡುಕೊಳ್ಳಿ

-ಕೇಶವಮೂರ್ತಿ

ಮುಖ ಪುಟ ಕನ್ನಡ ಕಾದಂಬರಿ ಪಿತಾಮಹ
ಹಾಗೂ ಸ್ವಯಂ ಅಧ್ಯಾಪಕ ಶ್ರೀ ಗಳಗನಾಥರು

ವಿಚಾರ ದೀಪ್ತಿ

ರಾಹುಲ್ ದ್ರಾವಿಡ್‌ಗೆ ಕನ್ನಡದಲ್ಲಿ ಪ್ರಶ್ನೆ ಕೇಳಿದಾಗ ಪಿಳಿಪಿಳಿ ಕಣ್ಣು ಬಿಡುತ್ತಾ "ಐ ಡೋಂಟ್ ನೋ ಕನ್ನಡ" ಎಂಬಂತೆ ಪತ್ರಕರ್ತರನ್ನು ನಖಶಿಖಾಂತ ನೋಡುತ್ತಾ ಮೈಕನ್ನು ಅನಿಲ್ ಕುಂಬ್ಳೆಯ ಮುಂದಿಟ್ಟಾಗ ಹೃದಯಕ್ಕೆ ಕತ್ತರಿ ಹಾಕಿದಂತಾಯಿತು. ಕುಂಬ್ಳೆಯಾದರೂ ಕನ್ನಡದಲ್ಲಿ ಉತ್ತರಿಸುತ್ತಾರೆಂಬ ಅತೀವ ನಿರೀಕ್ಷೆಯಿತ್ತು. ಆದರೆ ಕುಂಬ್ಳೆಯೂ ಸಹ ಇಂಗ್ಲೀಷ್‌ನಲ್ಲೇ ಮಾತಾಡಿದ್ದು ಗಾಯದ ಮೇಲೆ ಬರೆ ಎಳೆದಂತಾಯಿತು. ನಮ್ಮ ಆಟಗಾರರಿಗೆ ಕಿಂಚಿತ್ತಾದರೂ ಮಾತೃಭಾಷೆಯ ಬಗ್ಗೆ ಕಳಕಳಿ ಬೇಡವೆ? ಏಕಿಷ್ಟು ಅಭಿಮಾನಶೂನ್ಯತೆ ಆವರಿಸಿದೆ? ಕನ್ನಡ ನೆಲದಲ್ಲಿ ಜೀವಿಸುತ್ತಾ, ಕಾವೇರಿ ನೀರನ್ನು ಕುಡಿಯುತ್ತಾ, ಕನ್ನಡದ ಗಾಳಿ ಉಸಿರಾಡುತ್ತಾ ಬದುಕುವ ನಮ್ಮ ಆಟಗಾರರು ಕನ್ನಡದ ಬಗ್ಗೆ ಅಸಡ್ಡೆ ತೋರುತ್ತಿರುವುದು ದುರ್ದೈವ.

ಕುಂಬ್ಳೆ, ದ್ರಾವಿಡ್ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಲು ಕಾರಣವಾದದ್ದೇ ನಮ್ಮ ಕರ್ನಾಟಕ ತಂಡ. ಪ್ರತಿನಿಧಿಸಲು ಕರ್ನಾಟಕ ತಂಡಬೇಕು. ಮಾತಾಡಲು ಕನ್ನಡ ಬೇಡವೆ? ೧೯೯೭ ರಲ್ಲಿ ದ್ರಾವಿಡ್, ಕುಂಬ್ಳೆ, ಪ್ರಸಾದ್‌ರನ್ನು ತಂಡದಿಂದ ಹೊರದಬ್ಬಿದಾಗ ಕನ್ನಡದ ಕ್ರಿಕೆಟ್ ಅಭಿಮಾನಿಗಳು ಕನ್ನಡ ಧ್ವಜ ಹಿಡಿದು ಬೀದಿಗಿಳಿದು ಪ್ರತಿಭಟಿಸಿದ್ದನ್ನು ಈ ಆಟಗಾರರು ಇಷ್ಟು ಬೇಗ ಮರೆತರೇ?

ಪಾಕಿಸ್ತಾನದ ಕೆಲ ಆಟಗಾರರು ಪ್ರಶಸ್ತಿ ಸ್ವೀಕರಿಸುವ ವೇದಿಕೆಯಲ್ಲೂ ತಮ್ಮ ಭಾಷೆಯಲ್ಲೇ ಮಾತನಾಡುತ್ತಿದ್ದರು. ಶ್ರೀಲಂಕಾ ಆಟಗಾರರು ಸಹ ತಮ್ಮ ಮಾತೃಭಾಷೆಯಲ್ಲೇ ಮಾತನಾಡುತ್ತಾರೆ. ಪಕ್ಕದ ಆಂಧ್ರಪ್ರದೇಶದ ಆಟಗಾರರು ತಮ್ಮ ಪತ್ರಿಕಾಬಂಧುಗಳಿಗೆ ತೆಲುಗಿನಲ್ಲೇ ಉತ್ತರಿಸುವುದುಂಟು. ಇದು ನಿಜವಾದ ಭಾಷಾಭಿಮಾನ.

ಆದರೆ ಬೆಂಗಳೂರಿನಲ್ಲೇ ಬೆಳೆದ ದ್ರಾವಿಡ್ ಒಂದು ದಿನವೂ ಕನ್ನಡದಲ್ಲಿ ಮಾತನಾಡಲೇ ಇಲ್ಲ. ಇಂಥವರನ್ನು ನಮ್ಮ ಪತ್ರಿಕೆಗಳು 'ಕನ್ನಡದ ಕಣ್ಮಣಿ', 'ಕನ್ನಡದ ಕುವರ' ಎಂದೇ ಬಣ್ಣಿಸುತ್ತವೆ. ಆ ಹೊಗಳಿಕೆಗಾದರೂ ಬೆಲೆ ಕೊಡಬಾರದೆ? ನಿಜ ಹೇಳಬೇಕೆಂದರೆ ಕನ್ನಡ ನಾಡಿನ ಜನತೆ ಕ್ರಿಕೆಟಿಗರನ್ನು ಆರಾಧಿಸುವಷ್ಟರಮಟ್ಟಿಗೆ ಅಭಿಮಾನ ಬೆಳಸಿಕೊಂಡಿದ್ದಾರೆ. 'ನಮ್ಮ ಆಟಗಾರರು', 'ನಮ್ಮ ಹುಡುಗರು' ಎಂದು ಎದೆತಟ್ಟಿ ಹೇಳುತ್ತಾರೆ. ಆದರೆ ಮೊನ್ನೆ ಕುಂಬ್ಳೆ ಇಂಗ್ಲೆಂಡಿನಲ್ಲೋ, ಅಮೆರಿಕದಲ್ಲೋ ಹುಟ್ಟಿದವರಂತೆ ಇಂಗ್ಲಿಷ್ ಮಾತನಾಡಿ ಮನನೋಯಿಸಿದರು. ನಮ್ಮ ಅಟಗಾರರು ನಾಡು, ನುಡಿಯ ಬಗ್ಗೆ ಕೃತಘ್ನರಾಗದಿರಲಿ.

–ಸುರೇಶ ವಿಭೂತಿ

ಪ್ರತಿಗಾಮಿ ಶಿಕ್ಷಣ ಪದ್ಧತಿಗೆ ಕೊನೆ ಯಾವಾಗ?

–ಸುರೇಂದ್ರ ಕೌಲಗಿ.

ಹಳೆಯ ಭಕ್ತಿ ಶ್ರದ್ಧೆಗಳೆಲ್ಲ ಅಳಿಸಿಹೋಗಿವೆ ಮಾಸಿ
ಸುಳಿದಿಲ್ಲವಾವ ಹೊಸ ದರ್ಶನದ ಹೊಳಪುಂ
ಪಳಗಿದ್ದ ಮನೆಬಿದ್ದ ಕುಂಟ ಕುರುಡನ ತೆರದಿ
ತಳಮಳಿಸುತಿದೆ ಲೋಕ – ಮಂಕುತಿಮ್ಮ॥

ಡಿ. ವಿ. ಜಿ. ಯವರ ಈ ಅಳಲಿಗೆ ಮುಖ್ಯ ಕಾರಣ ಶಿಕ್ಷಣವೆಂದೇ ಹೇಳಬಹುದು. ಸೆಪ್ಟೆಂಬರ್ ೫ ಶಿಕ್ಷಕರ ದಿನಾಚರಣೆ. ಶಿಕ್ಷಕರ ದಿನಾಚರಣೆಯೆಂದರೆ ಇಡೀ ಸಮಾಜ ಎತ್ತ ಸಾಗಿದೆ ಎಂಬುದನ್ನು ಪರೀಕ್ಷಿಸುವ ದಿನವೆಂದೂ ಭಾವಿಸಬಹುದು. ಏಕೆಂದರೆ ಮಾನವನು ಅನಾಗರಿಕತೆಯಿಂದ ನಾಗರಿಕತೆಯತ್ತ ಸಾಗುತ್ತ ಬಂದಿರುವುದೇ ಶಿಕ್ಷಣದ ಮೂಲಕ. ಹದಿನೆಂಟನೇ ಶತಮಾನದಿಂದ ಇಂದಿನ ಶತಮಾನದವರೆಗೆ ವಿಶ್ವದಲ್ಲಿ ಸಂಭವಿಸಿರುವ ಎಲ್ಲ ಬೆಳವಣಿಗೆಗಳ ಹಿಂದೆ ಶಿಕ್ಷಣದ ಕೈವಾಡವಿದೆ. ಮುಂದೆಯೂ ಸಹ ಶಿಕ್ಷಣದ ಕೈವಾಡ ಇದ್ದೇ ಇರುತ್ತದೆ. ಆದ್ದರಿಂದ ಶಿಕ್ಷಕರ ದಿನಾಚರಣೆಯ ಸಂದರ್ಭದಲ್ಲಿ ಇಂದಿನ ಶಿಕ್ಷಣವು ಸಮಾಜವನ್ನು ಎತ್ತ ಸಾಗಿಸಿಕೊಂಡು ಹೋಗುತ್ತಿದೆ ಎಂಬ ವಿಷಯವಾಗಿ ಆಲೋಚಿಸುವುದು ಪ್ರತಿಯೊಬ್ಬ ಶಿಕ್ಷಿತನ ಕರ್ತವ್ಯವೆಂದು ತಿಳಿಯಬಹುದು. ಹೀಗೆ ಶಿಕ್ಷಣದ ಪರಿಣಾಮದ ಬಗ್ಗೆ ಆಲೋಚಿಸಲು ಪ್ರಾರಂಭಿಸಿದರೆ ನಮ್ಮ ಮೊದಲ ಅನಿಸಿಕೆಯೆಂದರೆ ಇಂದಿನ ಶಿಕ್ಷಣ ಸಮಾಜವನ್ನು ನಾಗರಿಕತೆಯಿಂದ ನಾಗರಿಕತೆಯತ್ತ ಮುನ್ನೆಡೆಸುವ ಬದಲು ಅನಾಗರಿಕತೆಯತ್ತ ಕೊಂಡೊಯ್ಯುತ್ತಿದೆ!

ಅನಾಗರಿಕ ಸಮಾಜದಲ್ಲಿ ಏನೆಲ್ಲ ಗುಣಧರ್ಮಗಳಿದ್ದವೋ ಲಕ್ಷಣಗಳಿದ್ದವೋ ಅವು ನಾಗರಿಕ ಸಮಾಜವೆಂದು ಇಂದು ನಾವು ಅಂದುಕೊಂಡಿರುವ ಸಮಾಜದಲ್ಲಿ ಕಾಣುತ್ತಿವೆ! ಅನಾಗರಿಕ ಮಾನವನಲ್ಲಿ ಖಡ್ಗ ಇತ್ತು. ಈಗ ಅದರ ಬದಲಿಗೆ ಕೋವಿ ಬಂದಿದೆ. ಈ ಕೋವಿ ಮಾನವನು ಆವಿಷ್ಕರಿಸಿರುವ ಎಲ್ಲಬಗೆಯ ವಿಧ್ವಂಸಕ ಸಾಧನಗಳ ಪ್ರತೀಕವಾಗಿದೆ. ಹಿಂದೆ

ಮಾನವನ ಕೈಯಲ್ಲಿದ್ದ ಖಡ್ಗ ಎದುರಿಗಿದ್ದ ಹಲವರನ್ನು ಮಾತ್ರ ಸಾಯಿಸಿದರೆ ಇಂದಿರುವ ಅಸ್ತ್ರ ಜನಸಮುದಾಯವನ್ನೇ ಸಾಯಿಸುತ್ತದೆ.

ಇದು ಶಸ್ತ್ರಾಸ್ತ್ರಗಳಿಗೆ ಸಂಬಂಧಿಸಿದ್ದಾದರೆ ಮೌಲ್ಯಗಳಿಗೆ ಸಂಬಂಧಿಸಿದ ವಿಷಯವೂ ಇದೆ. ಅನಾಗರಿಕ ಮಾನವ ಯಾವ ವಿವೇಚನೆಯೂ ಇಲ್ಲದೆ ಹಿಂಸೆಯನ್ನು ಆಚರಿಸುತ್ತಿದ್ದ. ಅನಾಗರಿಕ ಸಮಾಜದಲ್ಲಿ ಬಲವಿದ್ದವನು ಗೆಲ್ಲುತ್ತಿದ್ದ. ಇಂದೂ ಸಹ ಅದೇ ಸ್ಥಿತಿ ಇದೆ. ಯಾರ ಬಳಿ ಹಣಬಲವಿದೆಯೋ, ಸಂಖ್ಯಾ ಬಲವಿದೆಯೋ ಅವರು ಗೆಲ್ಲುತ್ತಾರೆ, ಇವು ಇಲ್ಲದವರು ಸೋಲುತ್ತಾರೆ. ಇದೆಲ್ಲದರ ಹಿಂದೆ ಶಿಕ್ಷಣದ ಕೈವಾಡವಿದೆ. ಇದನ್ನು ಗಮನಿಸಿದಾಗ ಇಂದು ಪ್ರಚಲಿತವಿರುವ ಶಿಕ್ಷಣ ಪದ್ಧತಿ ಮಾನವನ ನಿಜವಾದ ಏಳಿಗೆಗೆ ಸಹಕಾರಿಯಾಗಿರದೆ, ವಿರುದ್ಧವಾಗಿದೆ. ಪುರೋಗಾಮಿಯಾಗಿರದೆ ಪ್ರತಿಗಾಮಿಯಾಗಿದೆ. ಸಮಾಜವನ್ನು ಮುಂದಕ್ಕೆ ಸಾಗಿಸಿಕೊಂಡು ಹೋಗುವ ಬದಲು, ಹಿಂದಕ್ಕೆ ಸಾಗಿಸಿಕೊಂಡು ಹೋಗುತ್ತಿದೆ. ಮನಸ್ಸನ್ನು ತಿಳಿಗೊಳಿಸುವ ಬದಲು ಮಲಿನಗೊಳಿಸತ್ತಿದೆ. ಮನುಷ್ಯನ ಎಲ್ಲ ಪ್ರಗತಿ, ವಿಗತಿಗಳಿಗೆ, ಉನ್ನತಿ ಅವನತಿಗಳಿಗೆ ಅವನ ಮನಸ್ಸೇ ಕಾರಣ. ಎಲ್ಲದಕ್ಕೂ ಕಾರಣವಾಗುವ ಮನಸ್ಸಿನಲ್ಲಿ ಹೆಚ್ಚು ಹೆಚ್ಚು ಗೊಂದಲ ಉಂಟುಮಾಡುತ್ತಿದೆ ಇಂದಿನ ಶಿಕ್ಷಣ. ದುರ್ದೈವದ ಸಂಗತಿಯೇನೆಂದರೆ ಮನಸ್ಸಿನಲ್ಲಿ ಗೊಂದಲವುಂಟುಮಾಡಿ ಸಮಾಜದ ದಾರಿತಪ್ಪಿಸುವಂಥ ಶಿಕ್ಷಣದ ಪ್ರಚಾರಕ್ಕಾಗಿಯೇ ವಿಶ್ವದ ಎಲ್ಲ ದೇಶಗಳ ಎಲ್ಲ ಸರ್ಕಾರಗಳು ಕೋಟಿಗಳ ಮೊತ್ತದಲ್ಲಿ ಹಣವನ್ನು ಖರ್ಚುಮಾಡುತ್ತಿವೆ. ಶಿಕ್ಷಣ ಕ್ಷೇತ್ರಕ್ಕೆ ದಿಗಂತವೇ ಇಲ್ಲ.

ಪರಿಣಾಮವಾಗಿ ಮಾನವಕುಲ ತನ್ನ ಆತ್ಮಾಹುತಿಯನ್ನು ತಾನೇ ಮಾಡಿಕೊಳ್ಳುತ್ತಿದೆ. ವಿಶ್ವದ ಎಲ್ಲ ದೇಶಗಳಲ್ಲಿಯೂ ಮಹಾನ್ ಪುರುಷರು ಹುಟ್ಟಿದ್ದಾರೆ. ಆ ಎಲ್ಲ ಮಹಾನ್ ಪುರುಷರು ಶಿಕ್ಷಣ ಕುರಿತು ತಮ್ಮದೇ ಆದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಶಿಕ್ಷಣ ಕುರಿತು ವ್ಯಕ್ತಪಡಿಸಿರುವ ಅವರ ಅಭಿಪ್ರಾಯಕ್ಕೂ ಜನರಿಗೆ ದೊರೆಯುತ್ತಿರುವ ಶಿಕ್ಷಣಕ್ಕೂ ಯಾವ ಸಂಬಂಧವೂ ಇಲ್ಲ. ಶಿಕ್ಷಣ ತಜ್ಞರ ವಿಚಾರಗಳಿಗೆ ತದ್ವಿರುದ್ಧವಾದ ಪರಿಣಾಮಗಳು ಇಂದಿನ ಶಿಕ್ಷಣದಿಂದ ಉಂಟಾಗುತ್ತಿವೆ ಇಂದಿನ ಶಿಕ್ಷಣ ಪದ್ಧತಿ ಕುರುಡಾಗಿದೆ. ಅದಕ್ಕೆ ತಾನು ಹೋಗುತ್ತಿರುವ ದಾರಿ ಕಾಣುತ್ತಿಲ್ಲ. ಆದರೆ ತನ್ನ ಭುಜದ ಮೇಲೆ

ಸಮಷ್ಟಿಯ ಹಿತದ ಭಾರವನ್ನು ಹೊತ್ತುಕೊಂಡಿದೆ. ಇದು ಎಂಥ ಗಂಡಾಂತರಕಾರಿಯಾದ ವಿಷಯ ಎಂಬುದನ್ನು ಯಾರೂ ಸಹ ತಿಳಿಯಬಲ್ಲುದ್ದಾಗಿದೆ.

ಆದ್ದರಿಂದ ಇಂದಿನ ನಾಗರಿಕ ಸಮಾಜದ ಮುಂದೆ ಇರುವ ಅತ್ಯಂತ ದೊಡ್ಡ ಸವಾಲೇನೆಂದರೆ, ದೊಡ್ಡ ಪ್ರಶ್ನೆಯೇನೆಂದರೆ, ದೊಡ್ಡ ಸಮಸ್ಯೆಯೇನೆಂದರೆ ಇಂದಿನ ಪ್ರತಿಗಾಮಿ ಶಿಕ್ಷಣಪದ್ಧತಿಯನ್ನು ತಡೆಯುವುದು ಹೇಗೆ? ಈ ಪ್ರಶ್ನೆಗೆ ಉತ್ತರ ದೊರೆಯುವುದು ಸುಲಭವೇನಲ್ಲ. ಏಕೆಂದರೆ ಇಂದಿನ ಪ್ರತಿಗಾಮಿ ಶಿಕ್ಷಣ ಪದ್ಧತಿಗೆ ಬೆಂಬಲವಾಗಿ ವಿನಾಶಕಾರಿ ವಿಜ್ಞಾನ ಹಾಗೂ ತಂತ್ರಜ್ಞಾನ ನಿಂತುಕೊಂಡಿವೆ. ವಿಜ್ಞಾನ ಮತ್ತು ತಂತ್ರಜ್ಞಾನಗಳೊಂದಿಗೆ ಶಿಕ್ಷಣ ತಳಕುಹಾಕಿಕೊಂಡಿದೆ. ಇದೊಂದು ಬಿಡಿಸಲಾಗದ ಕಗ್ಗಂಟಾಗಿದೆ. ಇವೆಲ್ಲ ಸಮಸ್ಯೆಗಳಿಗೆ ಮೂಲವಾದ ಮನಸ್ಸಿನ ಕಡೆಗೆ ನಮ್ಮ ದೃಷ್ಟಿಯನ್ನು ಹಾಯಿಸಬೇಕಾಗುತ್ತದೆ. ಮುಳ್ಳಿನಿಂದ ಮುಳ್ಳನ್ನು ತೆಗೆಯಬೇಕೆಂಬ ಅನುಭವದ ನುಡಿಯಂತೆ ಪ್ರತಿಗಾಮಿ ಶಿಕ್ಷಣದಿಂದ ಉಂಟಾಗುತ್ತಿರುವ ದುಷ್ಪರಿಣಾಮಗಳನ್ನು ಮನಸ್ಸಿನ ಬಲದಿಂದಲೇ ತಪ್ಪಿಸಬೇಕಾಗುತ್ತದೆ. ಮನಸ್ಸನ್ನು ಮರ್ಕಟವನ್ನಾಗಿ ಮಾಡುವಂಥ ಶಿಕ್ಷಣದ ಮೇಲೆ ಮನಸ್ಸಿನ ನಿಯಂತ್ರಣವನ್ನು ಹೇಗೆ ಸಾಧಿಸಬೇಕೆಂಬುದರ ಬಗ್ಗೆ ಚಿಂತನೆ ನಡೆಯಬೇಕಾಗುತ್ತದೆ ಮತ್ತು ಆ ನಿಟ್ಟಿನತ್ತ ಪ್ರಯೋಗಗಳು, ಪ್ರಯತ್ನಗಳು ನಡೆಯಬೇಕು. ಇವು ಎಂದೂ ಬೃಹತ್ ಪ್ರಮಾಣದಲ್ಲಿ ನಡೆಯಲು ಸಾಧ್ಯವಿಲ್ಲ. ಚಿಕ್ಕ ಚಿಕ್ಕ ಸಮುದಾಯಗಳಲ್ಲಿ, ಗುಂಪುಗಳಲ್ಲಿ, ಸ್ಥಳಗಳಲ್ಲಿ ಮಾತ್ರ ನಡೆಯಬಹುದು. ಅಲ್ಲಿ ದೊರೆಯುವ ಒಳ್ಳೆಯ ಪರಿಣಾಮಗಳೆ ಹೊರಗಿನ ವಿಶಾಲ ಸಮುದಾಯದ ಮೇಲೆ ಪ್ರಭಾವವನ್ನು ಬೀರಬಲ್ಲದು.

ಮನಸ್ಸಿನ ಮೇಲೆ, ಮನಸ್ಸಿನ ಮೂಲಕ ಬುದ್ಧಿ ಮತ್ತು ಹೃದಯಗಳ ಮೇಲೆ ನಿಯಂತ್ರಣ ಸಾಧಿಸಬಲ್ಲ ಶಿಕ್ಷಣಗಳ ಪ್ರಯೋಗಗಳಿಂದ ಮಾತ್ರ ಇಂದಿನ ಪ್ರತಿಗಾಮಿ ಶಿಕ್ಷಣಪದ್ಧತಿಯನ್ನು ಬದಲಾಯಿಸಲು ಸಾಧ್ಯ.

* * * *

ಶಿಕ್ಷಣ ವೃತ್ತಿಗೆ ಗೌರವ ತಂದ ಗಳಗನಾಥ

-ಶ್ರೀನಿವಾಸ ಹಾವನೂರ

[ಕನ್ನಡ ಕಾದಂಬರಿಗಳ ಪಿತಾಮಹನೆಂದು ಕೀರ್ತಿ ಪಡೆದಿರುವ ಗಳಗನಾಥರು ಶಿಕ್ಷಕರಾಗಿದ್ದರು. ಇಂದಿಗೆ ಆ ಸಂಗತಿಗೆ ೧೧೬ ವರ್ಷಗಳಾದವು. ಆಗಿನ ಶಿಕ್ಷಕರೊಬ್ಬರ ಕಾರ್ಯವೈಖರಿ ಈ ಲೇಖನದಲ್ಲಿದೆ]

ಕ್ರಿ.ಶ.೧೮೮೯ ರಲ್ಲಿ ಟ್ರೇನಿಂಗ್ ಕಾಲೇಜು ಶಿಕ್ಷಣವನ್ನು ಮುಗಿಸಿದ ಮೇಲೆ ಶಿರಗುಪ್ಪಿಯ ಪ್ರಾಥಮಿಕ ಶಾಲೆಯಲ್ಲಿ ಗಳಗನಾಥರ ಮಾಸ್ತರಿಕೆಯು ಮೊದಲಾಯಿತು. ಜೀವೂಬಾಯಿಯೊಡನೆ ಮದುವೆಯೂ ಆಯಿತು. ಯೌವನಕಾಲ. ಅನುಕೂಲೆಯಾದ ಸಹಧರ್ಮಿಣಿ. ಪ್ರೀತಿಯ ಶಾಲಾಶಿಕ್ಷಣದ ಕೆಲಸ. "ಕೆಲಸದಲ್ಲಿ ನನ್ನ ಪ್ರೀತಿ ಹೆಚ್ಚು. ನನ್ನಷ್ಟಕ್ಕೆ ನಾನಿರುವದರಲ್ಲಿ ನನ್ನ ಆಸಕ್ತಿ ಬಹಳ. ಕೆಲಸ ಬಿಟ್ಟು ಸಿಕ್ಕಾಗ ಸಿಕ್ಕತ್ತ ಸುಮ್ಮನೆ ಎಡತಾಕುವ ಚಾಳಿಯಂತೂ ನನಗೆ ಗೊತ್ತೇ ಇಲ್ಲ. ಒಟ್ಟಿಗೆ ನಾನು ನನ್ನ ಜೀವನಾಧಾರವಾದ ಶಿಕ್ಷಣದ ಕೆಲಸವನ್ನು ನಿರ್ವಂಚನೆಯಿಂದ ಮಾಡುತ್ತಲಿದ್ದೆ," ಎಂಬುದಾಗಿ ಗಳಗನಾಥರು ತಮ್ಮ ಆಗಿನ ದಿನಗಳನ್ನು ಬಣ್ಣಿಸಿದ್ದಾರೆ.

ಗಳಗನಾಥರ ಲೇಖನಿಯ ಉಗಮ ಇಲ್ಲಿದೆ. ಪುಸ್ತಕರೂಪದಲ್ಲಿ ಮಾತ್ರ ಮೊದಲಿಗೆ ಹೊರಬಂದ ಕೃತಿ 'ಪದ್ಯಾರ್ಥಸಾರ' ಎಂಬುದು (೧೮೯೬). ಇದು ಆರನೆಯ ವಿದ್ಯಾರ್ಥಿಗಳಿಗಾಗಿ ಬರೆದ ಕೈಗನ್ನಡಿ. ವಿದ್ಯಾರ್ಥಿಗಳನ್ನು ಗಮನದಲ್ಲಿ ಇಟ್ಟುಕೊಂಡು ಬರೆದ ಇನ್ನೊಂದು ಕೃತಿಯೆಂದರೆ 'ಲಘುನಿಬಂಧ ಸಂಗ್ರಹ ಮತ್ತು ಪತ್ರವ್ಯವಹಾರ (೧೮೯೯)' ಇದರಲ್ಲಿ ಮೊದಲಿಗೆ ನಿಬಂಧರಚನೆಯ ಪದ್ಧತಿಯ ಬಗ್ಗೆ ವಿವರಣೆ ಕೊಟ್ಟಿದ್ದಾರೆ. "ವಿದ್ಯಾರ್ಥಿಗಳು ಸಂಸ್ಕೃತ ಇಲ್ಲವೆ ಅನ್ಯ ದೇಶೀಯ ಶಬ್ದಗಳನ್ನು ಅಗತ್ಯಕ್ಕಿಂತ ಹೆಚ್ಚು ಬೆರೆಸುವುದರಿಂದ ಭಾಷೆ ಚಂದವಾಗುತ್ತದೆಂಬ ಭಾವನೆಯನ್ನು ಬಿಟ್ಟು ಅಚ್ಚಗನ್ನಡ ಭಾಷೆಯನ್ನು ಬರೆಯಬೇಕು. ಹಾಗೂ ಶೈಲಿಯು ಆವೇಶಯುಕ್ತವಾಗಿರಬೇಕು. ಅಳುಬುರುಕ ಭಾಷೆ ಇರಕೂಡದು" ಎಂದು ಅದರಲ್ಲಿ ಹೇಳಿದೆ. ಇದೇ ಬಗೆಯ ಭಾಷೆಯನ್ನು ಗಳಗನಾಥರು ಮುಂದೆ ತಮ್ಮ ಗ್ರಂಥಗಳಲ್ಲಿ ಬಳಸಿದ್ದಾರೆ.

ಈ ಸಂಗ್ರಹದಲ್ಲಿ ಬಂದಿರುವ ೪೫ ನಿಬಂಧಗಳಲ್ಲಿ ಹೆಚ್ಚಿನವು ಚಿಂತನಪರ ನಿಬಂಧಗಳಾಗಿವೆ. ಸ್ತ್ರೀಶಿಕ್ಷಣ, ದೇಶಾಭಿಮಾನ, ವ್ಯಕ್ತಿತ್ವಕಲೆ, ಸತ್ಸಮಾಗಮ, ಗ್ರಂಥಾವಲೋಕನ -ಮುಂತಾದವುಗಳ ಕುರಿತು ನಾವು ಅವರ ಪ್ರಗತಿಪರ ವಿಚಾರಗಳನ್ನು ಈ ಪುಸ್ತಕದಲ್ಲಿ ಕಾಣುತ್ತೇವೆ. ಅಲ್ಲದೆ ಅವು ಅನೇಕ ಕಡೆಗಳಲ್ಲಿ ಅವರ ಸ್ವಂತದ ವ್ಯಕ್ತಿತ್ವ, ಒಲವು-ನಿಲುವು ಹಾಗೂ ಜೀವನ_ಧ್ಯೇಯಗಳನ್ನು ಬಿಂಬಿಸುವಂತಹವಾಗಿವೆ.

ಇದೆಲ್ಲ ಗಳಗನಾಥ ಮಾಸ್ತರರ ಬರವಣಿಗೆಯಾಯಿತು! ಲೇಖಕ ಗಳಗನಾಥರ

ಉದಯವಾದದ್ದು 'ಪದ್ಮನಯನಾ' ಎಂಬ ಸ್ವತಂತ್ರ ಕಾಲ್ಪನಿಕ ಕಾದಂಬರಿಯಿಂದ (೧೮೯೮). ರಮ್ಯತೆಯೇ ಪ್ರಧಾನವಾಗಿರುವ ಈ ಕೃತಿಯು ಸಂಸ್ಕೃತದಲ್ಲಿ ಭಾಷಾಂತರವಾಗಿದೆ. ಹಳ್ಳಿಗಳಲ್ಲಿ ಆ ಕಾಲಕ್ಕೆ ಇದರ ಆಟಗಳನ್ನು ಕಟ್ಟಿ ಆಡಿದರಂತೆ! ಅದಕ್ಕಿಂತ ಹೆಚ್ಚಾಗಿ ಈ ಕೃತಿಯು ಅನ್ಯ ಲೇಖಕರನ್ನೂ ಸೃಷ್ಟಿಸಿತು.

ಆಗಿನ ದಿನಗಳಲ್ಲಿ ಎಲ್ಲ ಶಿಕ್ಷಕರೂ ಟ್ರೇನಿಂಗ್ ಕಾಲೇಜಿನ ಕಟ್ಟೆ ಹತ್ತಿದವರಿರಲಿಲ್ಲ. ಗಳಗನಾಥರು ಹೇಳುವಂತೆ, ಅವರಲ್ಲಿ ಅನೇಕರು, "ಬೇಕಾದಾಗ ಸಾಲಿಗೆ ಬರುವ, ಮೇಜಿನ ಮೇಲೆ ಕಾಲು ಚಾಚಿ ಖುರ್ಚಿಯ ಮೇಲೆ ಕುಳಿತು ಎಲೆ ಅಡಿಕೆ ತಿನ್ನುವ, ಮತ್ತು ಅಂಗಿಯ ಗುಂಡಿಯನ್ನು ಕಟ್ಟಿಕೊಳ್ಳದ ಮಾಸ್ತರರಾಗಿದ್ದರು. ವಾರ್ಷಿಕ ಪರೀಕ್ಷೆಯಲ್ಲಿ ಹ್ಯಾಗಾದರೂ ವಿದ್ಯಾರ್ಥಿಗಳು ಪಾಸಾಗಿ ತಮಗೆ ಬಡ್ತಿ ದೊರೆತರಾಯಿತೆಂದು ಅವರು ಸಾಧಾರಣವಾಗಿ ತಿಳಿದುಕೊಂಡಿದ್ದರು. ಅಂದ ಬಳಿಕ ಅವರ ಪಾಲಿಗೆ ವಿದ್ಯಾರ್ಥಿಯು ಜಾಣನಾದ ಭಾಗ್ಯವೂ ಅಷ್ಟೇ, ದಡ್ಡನಾದ ಹಾನಿಯೂ ಅಷ್ಟೇ, ಸದಾಚಾರಿಯಾದ್ದರಿಂದ ಬರುವ ಕೀರ್ತಿಯೂ ಅಷ್ಟೇ, ಇವರ ಇನ್ನೊಂದು ವೈಶಿಷ್ಟ್ಯವೆಂದರೆ ಕೈಯಲ್ಲಿ ಛಡಿ ಹಿಡಿದು ಮಾತುಮಾತಿಗೆ ಅದನ್ನು ಪ್ರಯೋಗಿಸುವುದು. ದೇಹ ದಂಡವನ್ನು ಮಾಡದೇ ಒಂದು ತಾಸಾದರೂ ಕೆಲಸ ನಡೆಸಲಾರದ ಅಸತ್ ಶಿಕ್ಷಕರಿವರು. ಇಂಥ ನನ್ನನ್ನು ನನ್ನ ಉಪಶಿಕ್ಷಕರು ಕೋಪಪರವಶರಾಗಿ ಹೇಸದೇ ಈ ನೀಚ ಉಪಾಯವನ್ನು ಮಾಡುವಾಗ್ಗೆ ಬಹುತರವಾಗಿ ನಾನು ಪ್ರತಿಬಂಧಿಸದೆ ಬಿಟ್ಟಿಲ್ಲ. ಆಗ್ಗೆ ಇಂಥ ಪ್ರಸಂಗಗಳಿಂದ ನನಗೂ ನನ್ನ ಉಪಶಿಕ್ಷಕರಿಗೂ ವಿಶೇಷ ತರದ ವೈಮನಸ್ಸು ಈ ಅವಧಿಯವರೆಗೆ ಒದಗಲಿಲ್ಲೆಂಬುದು ಆನಂದದ ಸಂಗತಿ"

ಮಕ್ಕಳನ್ನು ಹೊಡೆಯುವುದಕ್ಕಿಂತ ಹೊಡೆತದ ಹೆದರಿಕೆ ಅವರಲ್ಲಿ ಮೂಡುವಂತೆ ಶಿಕ್ಷಕರ ನಡತೆ ಇರಬೇಕು ಎಂಬುದು ಗಳಗನಾಥರ ಆಶಯವಾಗಿದ್ದಿತು. ಅದಕ್ಕಾಗಿ ಅವರು, "ಹೊತ್ತಿಗೆ ಸರಿಯಾಗಿ ಶಾಲೆಗೆ ಬರೋಣ, ಉಡಿಗೆತೊಡಿಗೆಗಳನ್ನು ಸ್ವಚ್ಛವಾಗಿಯೂ ವ್ಯವಸ್ಥಿತವಾಗಿಯೂ ಇಟ್ಟುಕೊಳ್ಳೋಣ, ಶಿಕ್ಷಣದ ಸಾಧನಗಳನ್ನು ತಕ್ಕಂತೆ ಉಪಯೋಗಿಸೋಣ"– ಇವುಗಳ ಕಡೆಗೆ ತಾವೂ ತಮ್ಮ ಉಪಶಿಕ್ಷಕರೂ ಗಮನ ಕೊಡುತ್ತಿದ್ದುದಾಗಿ ಹೇಳಿದ್ದಾರೆ. ವಿದ್ಯಾರ್ಥಿಗಳ ಅವ್ಯವಸ್ಥೆಯ ಸಣ್ಣ ಸಣ್ಣ ಅಂಶಗಳಿಗೂ ಗಮನ ಕೊಟ್ಟು ಅವರನ್ನು ಎಚ್ಚರ ಗೊಳಿಸುತ್ತಿದ್ದರು. ಹುಡುಗರಿಗೆ ಒಂದಿಲ್ಲೊಂದು ಅಭ್ಯಾಸದ ಕೆಲಸ ಕೊಟ್ಟು ಅವರ ಗಮನ ಬೇರೆಡೆಗೆ ಹರಿಯದಂತೆ ಹಾಗೂ ಅವರು ಸೋಮಾರಿಗಳಾಗದಂತೆ ನೋಡಿಕೊಳ್ಳುತ್ತಿದ್ದರು.

ಬಂಕಾಪುರದ ಶಾಲೆಯಲ್ಲಿ ನಡೆದ ಒಂದು ಘಟನೆ ಇದು: ಗಳಗನಾಥರು ಉಪಯೋಗಿಸುತ್ತಿದ್ದ ಚಾಕು ೬ನೆಯ ತರಗತಿಯಲ್ಲಿದ್ದಾಗ ಕಳುವಾಯಿತು. ನಿತ್ಯವೂ ಉಪಯೋಗಿಸುತ್ತಿದ್ದ ಆ ಚಾಕುವಿನ ಮೇಲೆ ಅವರದು ವಿಶೇಷ ಮೋಹ. ಆಗ ತರಗತಿಯಲ್ಲಿ ದೃಷ್ಟಾಂತಗಳನ್ನು ಕೊಟ್ಟು ಕಳವಿನ ಬಗ್ಗೆ ಮಾರ್ಮಿಕವಾದ ಪಾಠ ಹೇಳಿದಾಗ ಕಳವು ಮಾಡಿದ ವಿದ್ಯಾರ್ಥಿ ಅಳುತ್ತ ಅದನ್ನು ಅವರ ಮೇಜಿನ ಮೇಲೆ ಇಟ್ಟು ಕ್ಷಮೆ ಬೇಡಿದನಂತೆ.

ಗಳಗನಾಥರು ಮುಖ್ಯಶಿಕ್ಷಕರಾಗಿ ಕೆಲಸ ಮಾಡಿದ ಕೊನೆಯ ಊರು ಗುತ್ತಲ. ಅಲ್ಲಿ ಕಳೆದ ಮೂರು ವರ್ಷಗಳು (೧೯೦೫-೧೯೦೮) ಅವರ ಮಾಸ್ತರಿಕೆಯ 'ವೈಭವದ' ಕಾಲವೆನ್ನಬೇಕು. ಅವರು ಆದರ್ಶ ಶಿಕ್ಷಕರಾಗಿದ್ದರೆನ್ನುವುದರ ಕುರುಹುಗಳು ಆ ಶಾಲೆಯಲ್ಲಿನ ಒಂದೆರಡು ಘಟನೆಗಳಿಂದ ಮತ್ತು ವರದಿಗಳಿಂದ ತಿಳಿದುಬರುವಂತಿವೆ. ಅಲ್ಲಿ ಬಂದ ಕೆಲವೇ ತಿಂಗಳುಗಳಲ್ಲಿ ತಮ್ಮ ಶಿಸ್ತು ವ್ಯವಸ್ಥೆಗಳ ಮಂತ್ರದಂಡವನ್ನು ಮುಂದೆಮಾಡಿ ಶಾಲೆಯ ವಾತಾವರಣವನ್ನೆ ಬದಲಿಸಿಬಿಟ್ಟರು. ಗುತ್ತಲ ಶಾಲೆಯ ಆಗಿನ 'ವಿಜಿಟ್‌ಬುಕ್' ಸುದೈವದಿಂದ ಇನ್ನೂ ಶಾಲೆಯಲ್ಲಿ ಉಳಿದುಕೊಂಡಿದ್ದು ಅದರಲ್ಲಿರುವ ಕೆಲ ಅವತರಣಿಕೆಗಳು ಇಂತಿವೆ;

ದಿನಾಂಕ ೨೫ ಸೆಪ್ಟಂಬರ್ ೧೯೦೫ರಂದು ಊರಿನ ಓರ್ವ ಸದ್ಗ್ರುಹಸ್ಥರು ಹೀಗೆ ಬರೆದಿದ್ದಾರೆ: "ನಾನು ಸುಮಾರು ೨೫ ವರ್ಷಗಳ ಲಾಗಾಯ್ತು ಈ ಶಾಲೆಯ ಕಮಿಟಿದಾರಯಿದ್ದು..... ಈಗಿರುವಷ್ಟು ಎಲ್ಲ ವಿಧದಿಂದಲೂ ಒಳ್ಳೇ ಸ್ಥಿತಿಯಲ್ಲಿ ಎಂದೂ ನೋಡಲಿಲ್ಲ. ಮಿ॥ ಗಳಗನಾಥ ಮಾಸ್ತರರು ಬಂದಾರಭ್ಯಾ ಶಾಲೆಯು ಎಲ್ಲ ಬಗೆಯ ಸ್ಥಿತಿಯಲ್ಲಿ ಯಾವ ರೀತಿಯಿಂದಲೂ ಆಕ್ಷೇಪಿಸುವಂತಿಲ್ಲ. ಇಷ್ಟೇ ಅಲ್ಲ, ಬಹಳ ಚಂದಾಗಿ ನಡೆದಿದೆಯಂತಾ ಜನರ ಬಾಯಿಂದಾ ಕೇಳೇನಿ."

ಓರ್ವ ಸರಕಾರಿ ಅಧಿಕಾರಿಯು ಬರೆದ 'ಶರಾ' ಮೇಲಿನ ಅಭಿಪ್ರಾಯವನ್ನೇ ಪುಷ್ಟೀಕರಿಸುತ್ತದೆ.

ಪ್ರಾಥಮಿಕ ಶಾಲೆಗಳಲ್ಲಿ ಪಾಲಕರು ನಡುನಡುವೆ ಶಾಲೆಗೆ ಬಂದು ಕಿರುಕುಳ ಕೊಡುವುದನ್ನು ಗಳಗನಾಥರು ಸಹಿಸುತ್ತಿದ್ದಿಲ್ಲ ಮತ್ತು ಅವರನ್ನು ಬೈದು ಕಳುಹಿಸುತ್ತಿದ್ದರು. ಅದರಿಂದ ತಮಗೆ ಅಪಮಾನವಾಯಿತೆಂದೆಣಿಸಿದ ಗುತ್ತಲದ ಕೆಲವರು ಮೇಲಧಿಕಾರಿಗಳಿಗೆ ಮೂಗರ್ಜಿಯನ್ನು ಬರೆದು ಗಳಗನಾಥರನ್ನು ಅಲ್ಲಿಂದ ವರ್ಗ ಮಾಡಿಸಬೇಕೆಂದು ಹವಣಿಸಿದರು.

ಇದಕ್ಕೆ ಬಾವಿಯ ಪ್ರಕರಣವೂ ಜತೆಗೂಡಿತು. ಆ ಊರಿನಲ್ಲಿ ಅದೊಂದು ಅಪೂರ್ವ ಘಟನೆಯಾಗಿ ಇಂದಿಗೂ ಜನಜನಿತವಾಗಿದೆ. ಗುತ್ತಲ ಊರಿನ ಬಳಿ ಹೊಳೆ-ಹಳ್ಳ ಯಾವುದೂ ಇಲ್ಲ. ಬಾವಿಗಳಿಂದಲೇ ನೀರು ಬರಬೇಕು. ಸಿಹಿ ನೀರಿನದು ಇನ್ನಷ್ಟು ಕೊರತೆ. ಜನರು ನೀರಿಗಾಗಿ ಪಡಿದಾಡುವುದು ಗಳಗನಾಥರ ಹೃದಯಕ್ಕೆ ತಾಗಿತು. ಶಾಲೆಯ ಆವಾರದಲ್ಲಿಯೇ ದೊಡ್ಡದಾದ ಬಾವಿಯನ್ನು ತೋಡಿಸಬೇಕೆಂದು ಸಂಕಲ್ಪಿಸಿದರು. ಹುಡುಗರ ಮುಖಾಂತರ ಚಂದಾಹಣವನ್ನು ಕೂಡಿಸತೊಡಗಿದರು. 'ಇದೆಲ್ಲಿಯ ಉಸಾಬರಿ' ಎಂದು ಊರಲ್ಲಿಯ ಕೆಲವರು ಟೀಕೆ ಮಾಡಿದರು. ಹಲವರು 'ಅಲ್ಲೆಲ್ಲಿ ನೀರು ಬಿದ್ದೀತು!' ಎಂಬ ಅಪಸ್ವರ ಎಳೆದರು. ಗೌಡರು, ನಾಯಕರು ಮೊದಲಾದ ಊರ ಪ್ರಮುಖರಿಗೆ ಇದು ಆತ್ಮಪ್ರತಿಷ್ಠೆಯ ಪ್ರಶ್ನೆಯಾಯಿತು.ಊರ ಹಿರಿತನ ತಮ್ಮದಿರುವಾಗ ಈ ಮಾಸ್ತರನ ಉಪದ್ವ್ಯಾಪ ಏಕೆ ಎಂದು ಮುಖ ತಿರುಹಿದರು. ಗಳಗನಾಥರೋ ಛಲದಂಕರು. 'ನೀವು ಕೊಟ್ಟರೂ ಬೇಡ' ಎಂದು ಕೆಲಸವನ್ನು

ಆರಂಭಿಸಿಬಿಟ್ಟರು. ಓರ್ವ ವೀರಶೈವ ಸ್ವಾಮಿಗಳ ಹತ್ತಿರ ಹೋಗಿ " ಇದು ಊರ ಹಿತದ ಕೆಲಸ. ನಿಮ್ಮ ಸಹಾಯ ಬೇಕು," ಎಂದರು. ಅದೇನು ಎಂಬ ಶಂಕೆ ಸ್ವಾಮಿಗಳಿಗೆ. ಆಗ ಗಳಗನಾಥರು ಕೇಳಿದುದು ಇಷ್ಟೇ: "ನಿಮ್ಮ ಆಶೀರ್ವಾದರೂಪಿಯಾಗಿ ಒಂದು ರೂಪಾಯಿ ವಂತಿಗೆ ಕೊಡಬೇಕು ಮತ್ತು ಗುದ್ದಲಿ ಪೂಜೆ ನೆರವೇರಿಸಬೇಕು."

ಬಾವಿಯನ್ನು ಅಗೆಯುವ ಕೆಲಸ ಮುಂದುವರಿಯಿತು. ಆದರೂ ಊರ ಹಿರಿಯರು ತಮ್ಮ ಬಿಗುಮಾನವನ್ನು ಬಿಟ್ಟುಕೊಡಲಿಲ್ಲ! ಆಗ ಉಪಶಿಕ್ಷಕರೂ ವಿದ್ಯಾರ್ಥಿಗಳೂ ಒಡ್ಡರೊಡನೆ ಪಾಲುಗೊಂಡರು. ಇಂದು ಅಲ್ಲಲ್ಲಿ ಕೇಳಿಬರುವ ಶ್ರಮದಾನ ಪದ್ಧತಿಯನ್ನು ಗಳಗನಾಥರು ೧೦೦ ವರ್ಷಗಳ ಹಿಂದೆಯೇ ಆರಂಭಿಸಿದ್ದರೆನ್ನಬಹುದಲ್ಲವೆ?

ಒಂದು ದಿನ ಬೆಳಿಗ್ಗೆ ಗಳಗನಾಥರು ಸೂಳೆಯರ ಕೇರಿಗೆ ಹಾಜರು! ಮಾಸ್ತರರು ಬಂದರೆಂದು ಅಲ್ಲಿಯ ಜನ ಗಜಿಬಿಜಿಸಿ ಬೇವಿನ ಮರದ ಕೆಳಗೆ ಗೊಂಗಡಿಹಾಸಿ ಅವರನ್ನು ಕೂಡ್ರಿಸಿದರು. ಗಳಗನಾಥರು ತಿಳಿಯಾದ ಸರಣಿಯಲ್ಲಿ ಆ ಬಾವಿಯ ಉಪಯೋಗ ಎಂತು ಎಂಬುದನ್ನು ತಿಳಿಸಿ ಹೇಳಿದಾಗ ಊರ ಪ್ರಮುಖರ ಉಪಪತ್ನಿಯರು ನೂರು ರೂಪಾಯಿ ಗಳವರೆಗೂ ವಂತಿಗೆಯನ್ನು ಕೂಡಿಸಿ ಕೊಟ್ಟರಂತೆ! ಆಗ ಊರಿಗೆ ಊರೇ ಜಾಗೃತವಾಯಿತು. ವಂತಿಗೆಯು ಆಣೆ, ಬಿಲ್ಲಿಗಳ ರೂಪದಲ್ಲಿಯೂ ಹರಿದು ಬಂತು. ಸುದೈವಕ್ಕೆ ಬಾವಿಯಲ್ಲಿ ಸೆಲೆಯೊಡೆಯಿತು. ಬೇಕಾದಷ್ಟು ನೀರು! ಅದರ ಪ್ರಾರಂಭೋತ್ಸವವೆನ್ನಬಹುದಾದ ಮುದ್ರೆಯ ಕಲ್ಲು ಕೂಡ್ರಿಸುವ ಸಮಯದಲ್ಲಿ ಗಳಗನಾಥರು ಊರಿಗೆ ಹಿರಿಯರೆನಿಸಿದ ನಾಯಕರಲ್ಲಿ ಮತ್ತೊಮ್ಮೆ ಹೋದರು. ಅಷ್ಟರಲ್ಲಿ ಆ ಹಿರಿಯರ ಬಿಗುಮಾನ ಕರಗಿ ನೀರಾಗಿದ್ದಿತು. "ಬರುತ್ತೇನೆ. ಆದರೆ ನನ್ನಿಂದ.... ರೂಪಾಯಿ ವಂತಿಗೆ ಇಸಕೊಳ್ಳಬೇಕು" ಎಂದರರಂತೆ. ಇಂದಿಗೂ ಶಾಲೆಯ ಆ ಬಾವಿಯು ಊರ ಜನರಿಗೆ ನೀರನ್ನು ಪೂರೈಸುತ್ತ ಗಳಗನಾಥರ ಹೆಸರನ್ನೆ ಹೊತ್ತು ನಿಂತಿದೆ!

ಗಳಗನಾಥರ ವಿರುದ್ಧ ದೂರುಗಳು ಹೋಗಿದ್ದುವಷ್ಟೆ. ಅದರ ವಿಚಾರಣೆಗಾಗಿ ಓರ್ವ ಯುರೋಪಿಯನ್ ಅಧಿಕಾರಿಯು ಗುತ್ತಲಕ್ಕೆ ಬಂದ. ಆಗ ಗಳಗನಾಥರು ೭ನೆಯ ತರಗತಿಗೆ ಪಾಠ ಹೇಳುತ್ತಿದ್ದರು. ತಾನು ಬಂದದ್ದು ಕಾಣುವಂತೆ ನಿಂತರೂ ಗಳಗನಾಥರು ಪಾಠವನ್ನು ನಿಲ್ಲಿಸಿ ಅವರನ್ನು ಎದುರುಗೊಳ್ಳಲು ಹೋಗಲಿಲ್ಲ. ಅಲ್ಲಿಯೇ ಪಾಠ ಹೇಳುತ್ತಿದ್ದ ಇತರ ಶಿಕ್ಷಕರಿಗೆ ಮತ್ತು ಹುಡುಗರಿಗೆ ಇದು ಕಂಡರೂ ಗಳಗನಾಥರು ಶಿಸ್ತನ್ನು ಮುರಿಯುವವರಲ್ಲವೆಂಬುದನ್ನು ತಿಳಿದು ಸುಮ್ಮನುಳಿದರು. ಆಗ ಸಾಹೇಬರು ತಮ್ಮ ಸಿಪಾಯಿಯನ್ನು ಒಳಗೆ ಕಳಿಸಿದರು. ಒಳ್ಳೇ ಆಢ್ಯತೆಯಿಂದ ಒಳಬಂದ ಸಿಪಾಯಿಯನ್ನು ಕಂಡವರೇ ಗಳಗನಾಥರ ಸಾತ್ವಿಕ ಸಂತಾಪ ಕೆರಳಿತು. "ಯಾವನಲೇ ಅವ? ಹೇಳದೇ ಕೇಳದೇ ಒಳಗೆ ಬಂದಾನ? ಕುತ್ತಿಗೆಗೆ ಕೈಕೊಟ್ಟು ಹೊರಗೆ ಹಾಕರಿ!" ಎಂದು ವಿದ್ಯಾರ್ಥಿಗಳಿಗೆ ಹೇಳಿದರು. ವರ್ಗದ ಮಾನಿಟರ್ ಅದಕ್ಕಾಗಿ ಎದ್ದು ನಿಂತಿರಲೂ

ಸಾಕು! ಸಾಹೇಬರ ಕೋಪ ಬ್ರಹ್ಮಾಂಡವನ್ನೇ ಮುಟ್ಟಿದ್ದಿತು. ಪಾಠ ಮುಗಿದ ಮೇಲೆ ಗಳಗನಾಥರು ಅವರನ್ನು ವಿನಯದಿಂದ ಸತ್ಕರಿಸಿದರೂ ಸಿಟ್ಟು ಕೆಳಗಿಳಿಯಲಿಲ್ಲ. "ನಿಮ್ಮನ್ನು ಡಿಸ್‌ಮಿಸ್ ಮಾಡಿದ್ದೇನೆ." ಎಂದು ಗುಡುಗಿದರು.

"ಪಾಠ ಹೇಳುವಾಗ ಅರ್ಧಕ್ಕೆ ಬಿಟ್ಟು ಬರಬೇಕಿತ್ತೆ? ಅದರಿಂದ ಪಾಠದೆಡೆಗೆ ವಿದ್ಯಾರ್ಥಿಗಳ ಲಕ್ಷ್ಯ ಚಂಚಲವಾಗುತ್ತಿದ್ದಿಲ್ಲವೆ? ಯಾರಾದರೂ ಹಾಗೆ ಅಡ್ಡಿ ಮಾಡಿದರೆ ಅದನ್ನು ಮುಖ್ಯೋಪಾಧ್ಯಾಯನಾದ ನಾನು ನಿವಾರಿಸಬೇಕಲ್ಲದೆ ನಾನೇ ಹಾಗೆ ಮಾಡಬೇಕೆ?" ಎಂದು ಕೇಳಿದರು ಗಳಗನಾಥರು.

"ನಾನೇ ಸ್ವತಃ ಬಂದಿದ್ದೆ. ಆವಾಗಲೂ ಈ ನಿಯಮವೆ?" ಎಂದು ಕೇಳಿದರು ಸಾಹೇಬರು.

"ನೀವು ಇಲ್ಲಿಗೆ ಬಂದುದು, ಅದೂ ಪೂರ್ವಸೂಚನೆ ಇಲ್ಲದೆ–ನಾನು ಹೇಗೆ ಇದ್ದೇನೆ; ಶಾಲೆ ಯಾವ ರೀತಿಯಲ್ಲಿ ನಡೆದಿದೆ ಎಂಬುದನ್ನು ನೋಡಲಿಕ್ಕೆ. ನಾನೇನಾದರೂ ಅರ್ಧಕ್ಕೆ ಪಾಠ ಬಿಟ್ಟಿದ್ದರೆ ನೀವೇ ಮಾಡಿದ ಶಾಲಾನಿಯಮವನ್ನು ನಾನು ಮುರಿದಂತಾಗುತ್ತಿತ್ತು. ನಾನು ಆ ರೀತಿ ವರ್ತಿಸಿದ್ದಕ್ಕೆ ನೀವು ಅನುಮೋದಿಸುವ ಬದಲು ದಂಡಿಸಿದರೆ ಅದು ಅನ್ಯಾಯವಷ್ಟೇ ಅಲ್ಲ, ಅಪರಾಧವೂ ಆಗುತ್ತದೆ!"

ಗಳಗನಾಥರ ಈ ಸ್ಪಷ್ಟೋಕ್ತಿಗೆ ಸಾಹೇಬರು ತುಸು ಮೆತ್ತಗಾದರು. ಗಳಗನಾಥರು ಅವರಿಗೆ ಬಾವಿಯನ್ನು ತೋರಿಸಿ ಅದರ ಉಪಯುಕ್ತತೆಯನ್ನು ತಿಳಿಸಿದ ಮೇಲಂತೂ ಆ ಅಧಿಕಾರಿಯು 'ವಿಜಿಟ್‌ಬುಕ್' ನಲ್ಲಿ ಪ್ರಶಂಸೆಯ ಶರಾ ಬರೆದು ಹೋದನಂತೆ.

ಗಳಗನಾಥರು ಗುತ್ತಲದಲ್ಲಿದ್ದುದು ಕ್ರಿ.ಶ.೧೯೦೮ ರ ಕೊನೆಯ ವರೆಗೆ, ಅನಂತರ ಧಾರವಾಡದ ಟ್ರೇನಿಂಗ್ ಕಾಲೇಜಿನಲ್ಲಿ ಅಸಿಸ್ಟಂಟ್ ಮಾಸ್ತರ್ ಎಂದು ಅವರ ನೇಮಕವಾಯಿತು.ಅವರ ಸಂಬಳ ೫೦ ರೂಪಾಯಿಗೆ ಏರಿತು.

ಶಿಕ್ಷಕನ ವೃತ್ತಿಯಿಂದ ನಿವೃತ್ತರಾದರೂ ಮಾಸ್ತರಿಕೆಯ ಕಾರ್ಯವನ್ನು ಅವರು ಮುಂದುವರೆಸಿದರೆಂದೇ ಹೇಳಬೇಕು. ಆ ಮುಂದೆ ಅವರು ರೂಪಾಂತರಿಸಿದ ಇಲ್ಲವೇ ಸ್ವತಂತ್ರವಾಗಿ ಬರೆದ ಕಾದಂಬರಿಗಳಲ್ಲಿ ಹಾಗೂ ಇತರ ಸಾಮಾಜಿಕ ಧಾರ್ಮಿಕ ಗ್ರಂಥಗಳಲ್ಲಿ ಅವರು ಜನತೆಗೆ ಏಕಪ್ರಕಾರವಾಗಿ ಕ್ಷಾತ್ರವೃತ್ತಿ, ಸದಾಚಾರ, ಸದ್ಗುರುಸಮಾಗಮ, ಕನ್ನಡಾಭಿಮಾನಗಳನ್ನು ಬೇಸರವಿಲ್ಲದೆ ಬೋಧಿಸಿದರು. ೧೯೧೦ ರಿಂದ ೧೯೪೦ ರ ವರೆಗೆ ಅವರು ಕಾದಂಬರೀ ಸಾರ್ವಭೌಮರಾಗಿದ್ದ ಕಾಲದಲ್ಲಿ ಅವರ ಈ ಮಾಸ್ತರಿಕೆಯಿಂದಾಗಿ ಲಕ್ಷಾವಧಿ ಕನ್ನಡಿಗರು ತಮ್ಮ ಬದುಕನ್ನು ಹಸನಾಗಿ ಇಟ್ಟುಕೊಳ್ಳುವ ಅವಕಾಶ ಒದಗಿಬಂತು. ಗಳಗನಾಥರು ಗತಿಸಿ ೬೩ವರ್ಷಗಳಾದ ಈ ಸಂದರ್ಭದಲ್ಲಿ ಅವರ ಈ ಕಾರ್ಯವನ್ನು ನೆನೆಯುವುದು ಉಚಿತವಾಗಿದೆ

(ಸಾಭಾರ: ಕಸ್ತೂರಿ, ಮಾರ್ಚ್–೧೯೭೭)

****

ಒಂದು ಮಾನವೀಯ ಆತ್ಮದ ನೋವು

–ಕೆ.ಜೆ.ಸಾಯದೀನ್

ಲೇಖಕರು ಭಾರತದ ಪ್ರಮುಖ ಶಿಕ್ಷಣಜ್ಞರಲ್ಲೊಬ್ಬರೂ ಗಾಂಧೀಜಿ ಯಿಂದ ಪ್ರಭಾವಿತರಾದವರೂ ಆಗಿದ್ದರು. ಕಳೆದ ೧೯೭೧ ಡಿಸೆಂಬರ್ ೭ ರಂದು ತಮ್ಮ ಮಿತ್ರರಿಗೆ ಬರೆದ ಈ ಪತ್ರದಲ್ಲಿ ಬಾಂಗ್ಲಾದೇಶದಲ್ಲಿ ಪಾಕಿಸ್ತಾನದ ಅತ್ಯಾಚಾರಗಳ ವಿಷಯ ತಮ್ಮ ನೋವನ್ನು ವ್ಯಕ್ತಪಡಿಸುವುದರೊಡನೆ ಜಗತ್ತಿನ ಇಂದಿನ ಸ್ಥಿತಿಯನ್ನು ಕುರಿತು ಕೂಡ ಚಿಂತಿಸಿದ್ದಾರೆ. ಈ ಪತ್ರ ಬರೆದ ಕೆಲವೇ ದಿನಗಳಲ್ಲಿ ಅವರು ಮರಣ ಹೊಂದಿದ್ದರಿಂದ ಪತ್ರದಲ್ಲಿ ಬಂದ ವಿಚಾರಗಳಿಗೆ ಹೆಚ್ಚು ಆರ್ತತೆ ಬಂದಿದೆ.

ಪ್ರಿಯ ಮಿತ್ರ,

ಜಗತ್ತು ಹಿಂಸೆ–ಶೋಷಣೆಗಳಿಂದ ಕೂಳ್ಕುದಿಯುತ್ತಿರುವಾಗಲೂ ಶಾಂತಿ,ಪ್ರೀತಿ, ಸಖ್ಯಗಳಿಂದೊಡಗೂಡಿದ ಸಂದೇಶದೊಡನೆ ಒಬ್ಬರನ್ನೊಬ್ಬರು ಅಭಿನಂದಿಸುವುದಕ್ಕೆ ಒಂದು ಪರ್ವದಿನ ದೊರಕಿದರೆ ಸಜ್ಜನರಿಗೆ ಎಷ್ಟೋ ಹಿತವೆನಿಸುತ್ತದೆ. ಉರಿಯುವ ದೀಪದ ಹೃದಯದಲ್ಲಿಯೂ ಶಾಂತಿಯ ಪುಟ್ಟ ನೆಲೆ ಇರುತ್ತದಂತೆ. ಕ್ರಿಸ್ಮಸ್ ದಿನ ಅಂಥ ದಿನವಾಗಿದೆ. ಆ ದಿನ ನಾವು ಶಾಂತಿಯ ಧ್ಯೇಯಕ್ಕೆ ನಮ್ಮನ್ನು ಮತ್ತೊಮ್ಮೆ ಅರ್ಪಿಸಿಕೊಂಡು ಅದನ್ನು ಸಾರ್ಥಕವಾಗಿ ಮಾಡಿಕೊಳ್ಳಬೇಕು. ಏಕೆಂದರೆ ಶಾಂತಿಯ ಅವಶ್ಯಕತೆ ಇಂದು ಹಿಂದೆಂದಿಗಿಂತಲೂ ತೀವ್ರವಾಗಿದೆ. ಈ ಮಾತು ಹೇಳಿ ಹೇಳಿ ಸವೆದ ಮಾತು ಎನ್ನುವುದು ನಿಜ. ಆದರೂ ಅದು ಸತ್ಯವಾದ ಮಾತೆಂಬುದು ಹೃದಯವಿದ್ರಾವಕವಾದ ತಥ್ಯವಾಗಿದೆ. ಪ್ರತಿಯೊಬ್ಬ ಸ್ತ್ರೀ ಮತ್ತು ಪುರುಷನ ಹೃದಯಕ್ಕೆ ಶಾಂತಿ ಬೇಕಾಗಿದೆ; ಏಕೆಂದರೆ ಅಲ್ಲಿ ವೈಫಲ್ಯಗಳೂ ಸಂಕಟಗಳೂ ಕ್ರೋಧಗಳೂ ಅಗೋಚರವಾಗಿ ಬೆಳೆಯುತ್ತಿವೆ; ವ್ಯಕ್ತಿ ವ್ಯಕ್ತಿಯ, ಗುಂಪುಗುಂಪಿನ, ರಾಷ್ಟ್ರ ರಾಷ್ಟ್ರದ ಪರಸ್ಪರ ಸಂಬಂಧಗಳಲ್ಲಿ ಶಾಂತಿ ಬೇಕಾಗಿದೆ; ಏಕೆಂದರೆ ಹಿಂಸೆ, ಸಮರ ನಿತ್ಯದ ಮಾತಾಗತೊಡಗಿದೆ. ನಾನು ಜೀವಮಾನವೆಲ್ಲ ಆಶಾವಾದಿಯಾಗಿದ್ದವನು. ಆದರೆ ಈಗ, ನನ್ನ ಬದುಕಿನ ಕೊನೆ ಸನ್ನಿಹಿತವಾಗುತ್ತಿರುವಾಗ, ಇದು ಸರಿಯಾದ ಎಣಿಕೆಯೆ ಎಂಬ ಸಂಶಯ ನನ್ನನ್ನು ಕಾಡುತ್ತಿದೆ. ನನ್ನ ಹೃದಯ ಹೇಳುತ್ತದೆ: ಸರಿಯಾದದ್ದೆಂದು; ನನ್ನ ಬುದ್ಧಿ ಮಾತ್ರ ಹಿಂಜರಿಯುತ್ತದೆ, ಡೋಲಾಯಮಾನವಾಗುತ್ತದೆ, ಶಂಕಿಸುತ್ತದೆ, ಮತ್ತು ಪ್ರಶ್ನೆಗಳನ್ನೆತ್ತುತ್ತದೆ. ಈ ಪ್ರಶ್ನೆಗಳಿಗೆ ನನ್ನ ಜೀವಮಾನದಲ್ಲಿ ಉತ್ತರ ಸಿಗುವುದಿಲ್ಲೆಂದು ನಾನು ಬಲ್ಲೆ. ಆದರೂ ಬದುಕು ಸಾಗಬೇಕು; ಅದಕ್ಕಾಗಿ ಬದುಕಿಗೊಂದು ಅರ್ಥ, ಒಂದು ಉದ್ದೇಶ ಇದೆಯೆಂಬ ಆಶಾವಾದ ಬೇಕು. ಅದಿಲ್ಲದೆ ಬದುಕೇ ಮುಂದುವರಿಯಲಾರದು.

ನನಗೆ ಜೀವನದಲ್ಲಿ ಬಂದ ಅತ್ಯಂತ ವೇದನಾಜನಕ ಅನುಭವಗಳಲ್ಲಿ ಈಚೆಗೆ ಪೂರ್ವ ಬಂಗಾಲದಲ್ಲಿ ನಡೆದ ದುರಂತದ್ದು ಒಂದಾಗಿದೆ. ಇತಿಹಾಸದಲ್ಲಿ ಇಂಥ ಅಥವಾ ಇದಕ್ಕೂ ಭೀಕರವಾದ ಸನ್ನಿವೇಶಗಳು ಬೇರೆಯೂ ಸಿಗಬಹುದು. ಆದರೆ ಇದು ನನಗೆ ಭೌತಿಕವಾಗಿಯೂ ಭಾವನಾತ್ಮಕವಾಗಿಯೂ ತೀರ ಹತ್ತಿರದಲ್ಲಿ ನಡೆದ ದುರಂತ. ಅದರಿಂದ ಅದರ ಪೆಟ್ಟು ನನಗೆ ಅಸಹನೀಯವಾಗಿದೆ. ನಾನು ಎಂದಿನಿಂದಲೂ ಪಾಕಿಸ್ತಾನಕ್ಕೆ ಒಳಿತನ್ನೇ ಹಾರೈಸಿದವನು; ಇಂದಾದರೂ ಹಾರೈಸುವವನು. ಪಶ್ಚಿಮ ಪಾಕಿಸ್ತಾನದಲ್ಲಿ ನನಗೆ ಅನೇಕ ಬಂಧು ಮಿತ್ರರಿದ್ದಾರೆ; ಪೂರ್ವ ಪಾಕಿಸ್ತಾನದೊಡನೆ ವೈಯಕ್ತಿಕ ಸಂಪರ್ಕ ಇಲ್ಲವೇ ಇಲ್ಲ ಎನ್ನಬಹುದು. ಆದ್ದರಿಂದ ಸಾಧಾರಣವಾಗಿ ಅವೆರಡರಲ್ಲಿ ಸಂಘರ್ಷವೊದಗಿದರೆ ನನ್ನ ಸಹಾನುಭೂತಿ ಪಶ್ಚಿಮದತ್ತ ಇರಬೇಕಾಗಿತ್ತು. ಆದರೆ ಪಶ್ಚಿಮದ ಮಿಲಿಟರಿ ಆಳರಸರು ಪೂರ್ವದ ಜನರ ಮೇಲೆ, ಅದೂ ಅವರಲ್ಲಿ ಅಧಿಕಾಂಶರು ಸ್ವಧರ್ಮೀಯರಾಗಿರುವಾಗ, ದಬ್ಬಾಳಿಕೆಯ, ಜನಾಂಗ ಹತ್ಯೆಯ ಸತ್ರವನ್ನು ಪ್ರಾರಂಭಿಸಿದ ಈ ಸನ್ನಿವೇಶ 'ಸಾಧಾರಣ' ಎನ್ನಲಾದೀತೆ? ಅದರಿಂದಾಗಿ ಒಂದು ಕೋಟಿ ಜನ ಬಂಗಾಲಿಗಳು ಪಾಶವೀ ಅತ್ಯಾಚಾರದಿಂದ ಪಾರಾಗಲು ಭಾರತಕ್ಕೆ ಓಡಿ ಬಂದರು. ಅದರಿಂದಾಗಿ ಪಾಕಿಸ್ತಾನದ ಅಖಂಡತ್ವಕ್ಕೂ ಐಕ್ಯಕ್ಕೂ ಪ್ರಾಣಾಂತಿಕ ಪೆಟ್ಟು ಬಿದ್ದಿತು ಮತ್ತು ಪಾಕಿಸ್ತಾನ ತಾನು ಇಸ್ಲಾಮಿಸತ್ತೆ ಎಂದು ಹೇಳಿಕೊಳ್ಳುವುದರಿಂದ ಈ ಘಟನೆಗಳಿಂದಾಗಿ ಜಗತ್ತಿನ ಮುಂದೆ ಇಸ್ಲಾಂ ಧರ್ಮದ ವಿಕೃತವೂ ಅಸತ್ಯವೂ ಆದ ಚಿತ್ರವನ್ನು ಪ್ರದರ್ಶಿಸಿದಂತಾಗಿದೆ.

ಇಂಥ ಪ್ರಸಂಗದಲ್ಲಿ ನ್ಯಾಯವಿರುದ್ಧವಾದ, ಭೂತದಯಬಾಹಿರವಾದ ಕೃತಿಗಳಿಗೆ ಬೆಂಬಲವಿತ್ತು ಮನುಷ್ಯ ಆತ್ಮಸಾಕ್ಷಿಯನ್ನು ಹೇಗೆ ಸಂತೈಸಬಲ್ಲ? ಇಸ್ಲಾಮ ಧರ್ಮದ ಪೈಗಂಬರರು ಒಮ್ಮೆ ತಮ್ಮ ಸಂಗಡಿಗರಿಗೆ, "ನೀವು ನಿಮ್ಮ ಮುಸ್ಲಿಂ ಬಾಂಧವನೊಡನೆ ಅವನದು ಸರಿಯಾಗಿದ್ದಾಗ ಮಾತ್ರವಲ್ಲ, ತಪ್ಪಾಗಿದ್ದಾಗಲೂ ಸಹಕರಿಸಬೇಕು," ಎಂದುಪದೇಶಿಸಿದರು. ಅದಕ್ಕೆ ಅವರು ಚಕಿತರಾಗಿ, "ಓ ಪೈಗಂಬರರೇ, ತಪ್ಪುಗಾರನೊಡನೆ ಹೇಗೆ ಸಹಕರಿಸಲಾದೀತು?" ಎಂದು ಕೇಳಿದರು. "ಅವನು ತಪ್ಪುದಾರಿ ಹಿಡಿಯುವುದನ್ನು ನಿಲ್ಲಿಸುವುದಕ್ಕೆ ಸರ್ವ ಪ್ರಯತ್ನ ಮಾಡುವುದರ ಮೂಲಕ!" ಎಂದು ಪೈಗಂಬರರು ಉತ್ತರವಿತ್ತರು. ಪಾಕಿಸ್ತಾನದ ನಿಜವಾದ ಮಿತ್ರರು ಅದರ ಸರಕಾರದ ನೀತಿಯನ್ನು ಸಮರ್ಥಿಸುವವರಲ್ಲ; ಅದರ ವಿರುದ್ಧ ಪ್ರತಿಭಟಿಸುವ ಧೈರ್ಯವನ್ನೂ ಭೂತಾನುಕಂಪವನ್ನೂ ಪ್ರದರ್ಶಿಸಬಲ್ಲವರೇ ಅದರ ನಿಜವಾದ ಮಿತ್ರರು.

ಜಗತ್ತಿನ ಎಷ್ಟೋ ಸರಕಾರಗಳು ಏನೋ ಸಹಾನುಭೂತಿಪರ ಗೋಣಗಾಟಗಳನ್ನೂ ನಿರಾಶ್ರಿತ ಪರಿಹಾರಕ್ಕೆ ಕಿಂಚಿತ್ ಸಹಾಯವನ್ನೂ ನೀಡುವುದರಲ್ಲೇ ತೃಪ್ತವಾಗಿವೆ ಹೊರತು, ಈ ಧಗಧಗಿಸುವ ದಾವಾಗ್ನಿಯನ್ನು ನಂದಿಸುವುದಕ್ಕಾಗಿ ತುರುಸಿನಿಂದ ಯತ್ನಿಸುವ ಧೈರ್ಯವಾಗಲಿ ಜ್ಞಾನವಾಗಲಿ

ಅವುಗಳಿಗಿಲ್ಲ. ಇದು ದುಃಖದ ಸಂಗತಿ. ಅವರೆಲ್ಲ ಧೂರ್ತತನದಿಂದ ತಂತಮ್ಮ ಲಾಭನಷ್ಟಗಳನ್ನು ಚಿಂತಿಸುತ್ತ ಅಡ್ಡ ಗೋಡೆಯ ಮೇಲೆ ಕುಳಿತಿದ್ದಾರೆ. ಮನುಷ್ಯಕುಲದ ವಿಶಾಲ ಹಿತ ದೃಷ್ಟಿಯಿಂದ ನೋಡದೆ, ಕೇವಲ "ನಾವು ನಮ್ಮ ರಾಷ್ಟ್ರೀಯ ಹಿತದೃಷ್ಟಿಯಿಂದಲೇ ನಮ್ಮ ಧೋರಣೆಗಳನ್ನು ನಿರ್ಧರಿಸುತ್ತೇವೆ," ಎನ್ನುವವರ ಮನೋವೃತ್ತಿ ನನಗೆ ಅರ್ಥವೇ ಆಗುವುದಿಲ್ಲ. ಇದನ್ನು ಅಕ್ಷರಶಃ ಅನುಸರಿಸುವುದಾದರೆ ಮಾನವ ಸಂಬಂಧಗಳು ತಿಮಿಂಗಿಲ ನ್ಯಾಯದ ಸ್ಥಿತಿಗೆ ಇಳಿದು ಹೋಗಬಹುದಲ್ಲವೆ? ಸಾವಿರಾರು ವರ್ಷಗಳ ಇತಿಹಾಸ ಮನುಷ್ಯನನ್ನು ಎಷ್ಟು ಮಟ್ಟಿಗೆ ನಾಗರೀಕನನ್ನಾಗಿ ಮಾಡಿವೆ? ಇದನ್ನು ನಾನು ಬರೆ ಬರೆಯುತ್ತಿರುವಾಗಲೇ ಅನಿಷ್ಟದಲ್ಲಿ ಅನಿಷ್ಟ ಸಂಭವಿಸಿಬಿಟ್ಟಿದೆ. ಪಾಕಿಸ್ತಾನಕ್ಕೂ ಭಾರತಕ್ಕೂ ಯುದ್ಧದ ಘೋರ ಸಂಭಾವ್ಯತೆಗಳೂ ಅಮಾನುಷತೆಗಳೂ ಅದರಲ್ಲಿ ಅಡಕವಾಗಿವೆ.

ಈ ವರ್ಷ ನನ್ನ ಪಾಲಿಗೆ ಅ-ಸಾಧನೆಯ ವರ್ಷವಾಗಿದೆ. ನಾನು ಭಾರತದಲ್ಲಿಯೂ ಹೊರಗೂ ಎಷ್ಟೋ ವಿಷಯಗಳಲ್ಲಿ ಪಾಲುಗೊಳ್ಳಲು ಯೋಜನೆ ಹಾಕಿಕೊಂಡಿದ್ದೆ. ಆದರೆ ಮತ್ತೆ ಮತ್ತೆ ಬಂದ ಅನಾರೋಗ್ಯ ಇದಕ್ಕೆಲ್ಲ ಅಡ್ಡಿಯಾಯಿತು. ಮನುಷ್ಯನ ಆತ್ಮ ಎಷ್ಟೆಲ್ಲ ವೈಕಲ್ಯಗಳ ಆಗರವಾದ ಶರೀರದಲ್ಲಿ ಮನೆ ಮಾಡಿದೆಯಲ್ಲಾ! ಎಷ್ಟೋ ವೇಳೆ ಶರೀರ ಅಸಹಕಾರ ಹೂಡಿದಾಗ ಆತ್ಮ ಸೆರೆಯಾಳಾಗಿ ಮೂಕಕ್ರೋಧದಿಂದ ಎಲ್ಲವನ್ನೂ ಸಹಿಸಿಕೊಳ್ಳಬೇಕಾಗುತ್ತದಲ್ಲಾ! ಈ ಪರಿಯಾಗಿ ನಾನು ಕಳೆದುಕೊಂಡ ಸಂದರ್ಭಗಳಲ್ಲಿ ಇಂದೂರಿ(ಭಾರತ)ನಲ್ಲಿ ನಡೆದ "ರಾಷ್ಟ್ರೀಯ ಸಹಮತ ಪರಿಷತ್ತು," ಕ್ಯೋತೊ(ಜಪಾನ್)ನಲ್ಲಿ ಜರುಗಿದ "ಜಾಗತಿಕ ಧರ್ಮ ಮತ್ತು ಶಾಂತಿ ಪರಿಷತ್ತು," ನ್ಯೂಯಾರ್ಕಿನಲ್ಲಿ ನಡೆದ ಅದೇ ಪರಿಷತ್ತಿನ ನಿರ್ದೇಶಕ ಮಂಡಳಿಯ ಸಭೆ ಇವೂ ಸೇರಿವೆ. ಇವೆಲ್ಲವುಗಳಲ್ಲಿಯೂ ನಾನು ಅಂತರಂಗ ಸಂಬಂಧವುಳ್ಳವನಾಗಿದ್ದೆ. ಬ್ರುಸೆಲ್ಸಿನಲ್ಲಿ ನಡೆದ "ವಿಶ್ವ ಶಿಕ್ಷಣ ಬಾಂಧವ್ಯ" ದ ಸ್ವರ್ಣಮಹೋತ್ಸವದ ಉದ್ಘಾಟನೆಗಾಗಿ ನನ್ನನ್ನು ಆಮಂತ್ರಿಸಿದ್ದರು. ಅದಕ್ಕಾಗಿ ನಾನು ಟೇಪ್ ರೆಕಾರ್ಡ್ ಮಾಡಿಸಿದ ಭಾಷಣದಿಂದ ಇಲ್ಲಿ ಕೆಲವಂಶವನ್ನು ಉದ್ಧರಿಸುವ ಸ್ವಾತಂತ್ರ್ಯ ವಹಿಸಿ ಈ ಇಪ್ಪತ್ತನೇ ಶತಮಾನದ ಕೊನೆಯ ದಶಕಗಳಲ್ಲಿ ಶಿಕ್ಷಣದ ಪಾತ್ರವನ್ನು ಕುರಿತು ನನ್ನ ವಿಚಾರಗಳನ್ನು ನಿಮ್ಮೊಡನೆ ಹಂಚಿಕೊಳ್ಳುತ್ತೇನೆ:

"ಈ ಶತಮಾನದ ಅವಸಾನ ಕಾಲ ಸಮೀಪಿಸುತ್ತಿದ್ದಂತೆ ಹಳೇ ಸಮಸ್ಯೆಗಳು ಹೆಚ್ಚು ತೀವ್ರ ರೂಪವನ್ನು ತಾಳುತ್ತಿವೆ. ಗಾಬರಿಗೊಳಿಸುವ ಹೊಸ ಹೊಸ ಪ್ರಶ್ನೆಗಳು ಮೇಲೆಳುತ್ತಿವೆ. ಘೋಷಿತ-ಅಘೋಷಿತ ಯುದ್ಧಗಳು, ಪರಮಾಣು ಶಸ್ತ್ರಾಸ್ತ್ರಗಳು ಭಯ ಮತ್ತು ಪರಿಸರದ ಕಲುಷದಿಂದೊದಗಬಹುದಾದ ಮಾನವಕುಲದ ನಾಶದ ಸಂಭವ ಒಂದೆಡೆಯಾದರೆ; ಅಂತರರಾಷ್ಟ್ರೀಯ ರಾಜಕೀಯ ಆಚಾರಭ್ರಷ್ಟತೆ, ಮಾನವ ಹಕ್ಕುಗಳ ಮೇಲೆ ಅತ್ಯಾಚಾರ ಮಾಡುವುದು, ಜನಾಂಗವಧೆಯ ಬಹಿರಂಗ ಕೃತ್ಯಗಳು, ಇನ್ನೊಂದೆಡೆ ಮನುಷ್ಯನ ದುರಂತ ಅವಸ್ಥೆಯನ್ನು ಎತ್ತಿತೋರಿಸುತ್ತಿವೆ.

ಸಾಮಾನ್ಯ ವ್ಯಕ್ತಿಯಾದವನು ತನ್ನ ಸುತ್ತಲ ಸಾಮಾಜಿಕ ಅಥವಾ ಔದ್ಯೋಗಿಕ ಯಂತ್ರಚಕ್ರದ ಒಂದು ಹಲ್ಲಾಗಿ ಬಿಡುತ್ತಿದ್ದಾನೆ; ಅವನು ತನ್ನ ವೈಯಕ್ತಿಕ ಸಾರ್ಥಕ ಭಾವವನ್ನು ಕಳೆದುಕೊಂಡು ನಿರ್ವಿಣ್ಣನಾಗುತ್ತಾನೆ; ಇಲ್ಲವೇ 'ಸಂಘಟನಾಧಿಕಾರಿ' ಎಂಬ ಆ ಅಪ್ರಿಯ ಮನುಷ್ಯನಾಗುವುದಕ್ಕೆ ಅವನು ಮೌನವಾಗಿ ಒಪ್ಪಿಕೊಂಡುಬಿಡುತ್ತಾನೆ. ಅವನಿಗೆ ಧೈರ್ಯವಿಲ್ಲ, ಸೂಕ್ಷ್ಮವೇದಿತ್ವವಿಲ್ಲ, ಮಾನವ ಬಾಂಧವ್ಯದ ಸಜೀವ ಸಂವೇದನೆ ಇರುವುದಿಲ್ಲ. ಅವನಿಗಿರುವ ಆಸಕ್ತಿ ಒಂದೇ– ವೈಯಕ್ತಿಕ ಯಶಸ್ಸು.

"ಇಂಥ ಅವಸ್ಥೆಯಲ್ಲಿ ಶಿಕ್ಷಕನೆನಿಸುವವನ ಕರ್ತವ್ಯವೇನು? ಅವನಿಗೆ ಈಗ ತನ್ನ ಕೆಲಸಕ್ಕೆ ಮೊದಲಿಗಿಂತಲೂ ಸೂಕ್ಷ್ಮವೂ ತೀಕ್ಷ್ಣವೂ ಆದ ಉಪಕರಣಗಳು ಲಭ್ಯವಾಗಿವೆಯೆಂಬುದು ನಿಜವಿರಬಹುದು. ಆದರೂ ಅವನು ಯಾವ ಮೂಲಭೂತ ಪ್ರಶ್ನೆಗಳನ್ನೂ ಎತ್ತದೆ, ಪೂರ್ವಸಿದ್ಧವಾಗಿರುವ ಉತ್ತರಗಳನ್ನೆಲ್ಲ ಕಣ್ಮುಚ್ಚಿ ಒಪ್ಪಿಕೊಂಡು, ಸ್ವಪಕ್ಷ, ಸ್ವದೇಶ, ಸ್ವಜಾತಿ ಅಥವಾ 'ಸ್ವಧರ್ಮ'ದ ಹೆಸರಿನಲ್ಲಿ ನಡೆಯುವ ಎಲ್ಲ ಸಾಮಾಜಿಕ ಅನ್ಯಾಯಗಳ ಕಡೆ ಕಣ್ಮುಚ್ಚಿಕೊಂಡು ಬರೇ ವಿದ್ಯಾದಾನದ ನಿತ್ಯಕ್ರಮಗಳನ್ನು ಪೂರೈಸುವುದರಿಂದ ತೃಪ್ತನಾಗುವುದಾದರೆ ಅವನು ನಿಜವಾದ ಶಿಕ್ಷಕನಲ್ಲ. ಒಳ್ಳೇ ಶಿಕ್ಷಣದಿಂದ ದೂರಗಾಮಿ ಸತ್ಪರಿಣಾಮವಾಗುತ್ತದೆ ಎಂಬುದರಲ್ಲಿಯೂ ಅದು ಸರಿಯಾದ ಮತ್ತು ಮಾನವೀಯ ಭಾವನೆಗಳನ್ನೂ ಕಲ್ಪನೆಗಳನ್ನೂ ಪೋಷಿಸಲು ಶಕ್ತವಾದೀತೆಂಬುದರಲ್ಲಿಯೂ ಅವನಿಗೆ ಅದಮ್ಯವಾದ ವಿಶ್ವಾಸಬೇಕು. ಕೊನೆಯಲ್ಲಿ ಈ ಮಾನವೀಯ ಭಾವನೆ ಕಲ್ಪನೆಗಳೇ ಪರಮಾಣುಬಾಂಬಿಗಿರುವ ಏಕಮಾತ್ರ ಪ್ರತೀಕಾರ. ತಾನು ಸಾತ್ವಿಕ ಶಕ್ತಿಗಳ ಪಕ್ಷದಲ್ಲಿ ದುಡಿಯಬೇಕೋ ತಾಮಸ ಶಕ್ತಿಗಳ ಪಕ್ಷದಲ್ಲೋ ಎಂಬುದನ್ನು ಶಿಕ್ಷಕ ಖಚಿತವಾಗಿ ನಿರ್ಧರಿಸಿಕೊಳ್ಳಬೇಕು; ಕರುಣಾಳುಗಳಾದ, ಸಂವೇದನಶೀಲರಾದ, ಸೃಜನಶೀಲರಾದ, ಮಾನವನ ಏಕತ್ವದಲ್ಲಿಯೂ ಸರ್ವ ಮಾನವರಿಗೆ ನ್ಯಾಯಸಿಗಬೇಕೆಂಬುದರಲ್ಲಿಯೂ ನಂಬಿಕೆಯುಳ್ಳ ಮಕ್ಕಳನ್ನೂ ತರುಣರನ್ನೂ ಪಳಗಿಸಿ ಬೆಳೆಸುವುದಕ್ಕಾಗಿ ತನ್ನ ಮನಸ್ಸು ಆತ್ಮಗಳ ಸಾಮರ್ಥ್ಯವನ್ನೆಲ್ಲ ವಿನಿಯೋಗಿಸಲು ಸಿದ್ಧನಿದ್ದೇನೆಯೇ ಅಥವಾ ಅವರನ್ನು ಸ್ವದೇಶಾಭಿಮಾನಭ್ರಾಂತರೂ ಲೋಕದ ದುಃಖಕ್ಕೆ ಬಧಿರರೂ ತಮ್ಮ ಕ್ಷುಲ್ಲಕ ಕಲಾವಿಹೀನ ಸ್ವಂತ ಹಿತದಲ್ಲೇ ಆಸಕ್ತರೂ ಸೃಜನಶೀಲ ಕರ್ಮಗಳಲ್ಲಿ ಅನಾಸಕ್ತರೂ ವಿನಾಶ ಪರವಾದ ಪ್ರವೃತ್ತಿಗಳಿಗೆ ತಮ್ಮನ್ನು ಒಪ್ಪಿಸಿಕೊಂಡು ಅಧಿಕಾರಪಿಪಾಸುಗಳಾದ ಬಾಯ್ಬಡುಕ ನಾಯಕರ ಕೈಯ ಉಪಕರಣಗಳಾಗುವುದಕ್ಕೆ ಸಿದ್ಧರೂ ಆದ ಎಳೆಯರನ್ನು ತರಬೇತಿ ಮಾಡುವುದೇ ತನ್ನ ಧ್ಯೇಯವೋ ಎಂದು ಶಿಕ್ಷಕ ಗೊತ್ತುಮಾಡಿಕೊಳ್ಳಬೇಕು. ಮಾನವನು ನಿಸರ್ಗದ ಶಕ್ತಿಗಳನ್ನು ಗೆಲ್ಲುವುದಕ್ಕೆ, ಪ್ರಜನನ ರಹಸ್ಯವನ್ನು ಭೇದಿಸುವುದಕ್ಕೆ, ಚಂದ್ರಲೋಕದಲ್ಲಿ ಇಳಿಯುವುದಕ್ಕೆ ಶಕ್ತನಾಗಿದ್ದಾನೆ. ಆದರೆ ಮನುಷ್ಯನ ಈ ವಿಜಯ ಕೇವಲ ಭೌತಿಕ ಪದಾರ್ಥಕ್ಕೇ ಸೀಮಿತವಾಗಿರಬೇಕೆಂದು ನಮ್ಮ ಮಾನವನ ಅಂತರಂಗ ವಿಜಯಕ್ಕಾಗಿ

ಜಾಣ್ಮೆಯಿಂದ, ಕಲ್ಪನಾಶಕ್ತಿಯೊಡನೆ ಯತ್ನಿಸಿದರೆ ಈ ರಂಗದಲ್ಲಿಯೂ ನಮಗೆ ಯಶಸ್ಸು ಸಿಗಲಾರದೆ?"

ಹೌದು, ಇಷ್ಟೆಲ್ಲಾ ಹೇಳುತ್ತೇನೆ. ಆದರೆ ಆಮೇಲೆ ಯೋಚನೆ ಬರುತ್ತದೆ: ಹೇಳಿದ್ದು ಯಾರ ಮೇಲಾದರೂ ಪ್ರಭಾವ ಬೀರುತ್ತದೆಯೆ?

ನಾನು ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಕಳೆದ ವರ್ಷ ಮತ್ತು ಈ ವರ್ಷದ ಪ್ರಾರಂಭದಲ್ಲಿ ಕೊಟ್ಟ ಕೆಲ ಭಾಷಣಗಳು ಪ್ರಕಟವಾಗಿದೆ. ಇಸ್ಲಾಂ ಮೇಲೆ ನಾನು ಬರೆಯುತ್ತಿರುವ ಪುಸ್ತಕ ಮುಗಿಯುತ್ತ ಬಂದಿದೆ. ಅದನ್ನು ಬರೆಯತೊಡಗಿದಾಗ ನನಗೆ ಸಂಕೋಚವೇ ಇತ್ತು. ಯಾಕೆಂದರೆ ಅದು ನನ್ನ ವಿಶೇಷ ಅಧ್ಯಯನ ವಿಷಯವಾಗಿಲ್ಲ. ಆದರೆ ಮುಸ್ಲಿಮರೂ ಇಸ್ಲಾಮಿನ ಬಗ್ಗೆ ಬರೆದ ಹಲವು ಪುಸ್ತಕಗಳನ್ನು ನಾನು ಓದಿದ್ದೇನೆ; ಮೊದಲನೆಯವರಲ್ಲಿ ಕೆಲವರ ಪೂರ್ವಾಗ್ರಹಗಳಿಂದಲೂ ಎರಡನೆಯವರಲ್ಲಿ ಕೆಲವರ ಸಂಕುಚಿತ ವೃತ್ತಿಯಿಂದಲೂ ಇಸ್ಲಾಮಿಗೆ ಎಷ್ಟು ಅಪಚಾರವಾಗಿದೆಯೆಂದು ಮನಗಂಡಿದ್ದೇನೆ. ಧರ್ಮ ಧರ್ಮಗಳೊಳಗಿನ ತಪ್ಪು ತಿಳಿವಳಿಕೆಗಳನ್ನು ಅವು ಹೆಚ್ಚಿಸಿವೆ. ಈ ಪುಸ್ತಕ ಪ್ರಕಟವಾದಾಗ ಅದು ಇಸ್ಲಾಂ ಏನನ್ನು ಹೇಳುತ್ತದೆ ಎಂಬ ಬಗ್ಗೆ ವಿಶಾಲ ಮನೋಭಾವದ ಮತ್ತು ಮಾನವೀಯ ವ್ಯಾಖ್ಯೆಯನ್ನು ಒದಗಿಸಲು ಸ್ವಲ್ಪ ಮಟ್ಟಿಗೆ ಸಮರ್ಥವಾದೀತೆಂದು ಭಾವಿಸುತ್ತೇನೆ. ನನ್ನ 'ಆತ್ಮಕಥೆ' ಕೆಲ ಕಾಲದಿಂದ ಮೂಲೆ ಗುಂಪಾಗಿದೆ. ಆದರೆ ಅದರಿಂದೇನು? ಅದು ಹೇಳಿಕೇಳಿ ಒಂದು ತರಹದ ಕ್ಷಮ್ಯವಾದ ಅಹಂಕಾರ; ಅದು ಪೂರ್ಣವಾಗದಿದ್ದರೂ ನಷ್ಟವಿಲ್ಲ.

ನಮ್ಮ ಮನೆಗೆ ಎಷ್ಟೋ ದೇಶಗಳಿಂದ ಎಷ್ಟೋ ಶಾಸ್ತ್ರಗಳಲ್ಲಿ ಮತ್ತು ಎಷ್ಟೋ ಕಾರ್ಯರಂಗಗಳಲ್ಲಿ ನುರಿತ ಕೆಲ ಹಳೆಯ ಮತ್ತು ಕೆಲ ಹೊಸ ಗೆಳೆಯರನ್ನು ಸ್ವಾಗತಿಸುವ ಭಾಗ್ಯ ನಮಗೆ ಬಂದಿದೆ. ಅವರು ತಮ್ಮ ದೇಶಗಳಲ್ಲಿಯೂ ಜಗತ್ತಿನಲ್ಲಿಯೂ ನಡೆಯುತ್ತಿರುವ ಅನೇಕ ಸಂಗತಿಗಳನ್ನು ನಮಗೆ ವಿವರಿಸಿದ್ದಾರೆ. ಇವುಗಳಿಂದ ನನಗೆಷ್ಟು ಅಸಂತುಷ್ಟಿಯೋ ಅವರಿಗೂ ಅಷ್ಟೇ ಅಸಂತುಷ್ಟಿ ಆಗಿದೆ. ಈ ವರ್ಷದ ಬಹುಭಾಗದಲ್ಲಿ ನನ್ನ ಮೂವರು ಮಗಳಂದಿರು ವಿದೇಶಗಳಿಂದ ನನ್ನಲ್ಲಿ ಬಂದು ಇದ್ದಾರೆಂಬುದೂ ಒಂದು ಸಂತೋಷ. ನಾವು ಕಾಶ್ಮೀರದಲ್ಲಿ ಆರು ವಾರಗಳನ್ನು ಬಹು ಉತ್ಸಾಹದಿಂದ ಕಳೆದೆವು. ಅಲ್ಲಿನ ಮುಖ್ಯ ಮಂತ್ರಿಗಳ ಔದಾರ್ಯದಿಂದ ರಾಜ್ಯದಲ್ಲಿ ಅತಿ ಸುಂದರ ಸರಕಾರಿ ಧಾಮವೊಂದರಲ್ಲಿ ನಮ್ಮ ವಸತಿ ಸಾಧ್ಯವಾಯಿತು. ನಿಸರ್ಗದ ಸೌದರ್ಯ ಶಾಂತಿಗಳು ಮನಸ್ಸಿಗೂ ದೇಹಕ್ಕೂ ಎಷ್ಟು ಅಪ್ಯಾಯಮಾನವಾಗಿರುತ್ತವೆ! ಕಾಶ್ಮೀರದ ಚಲುವಿನ ಪರಾಕಾಷ್ಠೆಯನ್ನು ನೋಡಿಯೇ ನಂಬಬೇಕು.

ನಮ್ಮ ಹೊಸ ಮನೆ ಈಗ ಒಂದು ರೂಪಕ್ಕೆ ಬಂದಿದೆ. ನೀವೇಕೆ ಬಂದು ನಮ್ಮನ್ನು ಅಲ್ಲಿ ಕಾಣಬಾರದು?

(ಸಾಭಾರ; ಕಸ್ತೂರಿ, ಏಪ್ರಿಲ್-೧೯೭೨)

ಕಣ್ಮರೆಯಾದ ರಚನಾತ್ಮಕ ಕಾರ್ಯಕರ್ತ ಶ್ರೀನಿವಾಸರಾವರ ಸ್ಮರಣೆ

–ಸತ್ಯವ್ರತ

ಪರಿಪಕ್ವವಾದ ಹಣ್ಣು ಕೊಂಬೆಯಿಂದ ಹೇಗೆ ತಾನಾಗಿಯೇ ಕಳಚಿ ಬೀಳುತ್ತದೋ ಹಾಗೆ ೨೦೦೫ ಜುಲೈ ತಿಂಗಳ ೧೩ ನೇ ತಾರೀಖು ಮಧ್ಯಾಹ್ನ ೩.೪೫ ಕ್ಕೆ ಬಹು ಸಹಜವಾಗಿಯೇ ಜೀವನ ವೃಕ್ಷದಿಂದ ಶ್ರೀನಿವಾಸರಾಯರ ಪಾರ್ಥಿವ ಶರೀರ ಕಳಚಿಕೊಂಡಿತು. ಮುಕ್ತಿಯ ನೇರ ಸ್ಪಷ್ಟ ವ್ಯಾಖ್ಯೆ ಇದೇ.

ಶ್ರೀನಿವಾಸರಾಯರ ಅನೇಕಾನೇಕ ಸಂಸ್ಮರಣೆಗಳು ಮನಸ್ಸನ್ನು ಮುತ್ತಿ ಬರುವುದು ಸಹಜ. ಶ್ರೀನಿವಾಸರಾವ್ ನಿಜಕ್ಕೂ ಬಹು ಹಳೆಯ ಸ್ವಾತಂತ್ರ್ಯಯೋಧರು. ಪ್ರಾಯಶಃ ಅಷ್ಟು ಹಳೆಯ ಮತ್ತು ಹಿರಿಯ ಸ್ವಾತಂತ್ರ್ಯಯೋಧರು ನಮ್ಮ ರಾಜ್ಯದಲ್ಲಿ ಇದ್ದುದೇ ಕಡಿಮೆ. ಅವರು ಪ್ರಚಾರ ಬಯಸಿದವರಲ್ಲ, ಕೀರ್ತಿಕಾಮಿಗಳಲ್ಲ; ಹೋರಾಟದಲ್ಲಿ ಮುಂದಿದ್ದರೂ ಮುಂಚೂಣಿಗೆ ಬಂದು ಕಾಣಿಸಿಕೊಳ್ಳುವವರಲ್ಲ. ರಾಜನೀತಿಗೆ, ಪಕ್ಷ–ಪಂಗಡಗಳ ಗೋಜಿಗೆ ಹೋಗುವವರಲ್ಲ. ಅವೆಲ್ಲ ಅವರಿಗೆ ಒಗ್ಗದ ಕ್ಷೇತ್ರಗಳು ಮತ್ತು ವಿಷಯಗಳು ಆದ್ದರಿಂದ ಅವರ ಪರಿಚಯ ಸಾರ್ವಜನಿಕ ಕ್ಷೇತ್ರದಲ್ಲಿ ವ್ಯಾಪಿಸುವುದೆಂತು? ಶುದ್ಧ ರಚನಾತ್ಮಕ ಕಾರ್ಯಕರ್ತರಾಗಿ ಬೆಳಗಿದರು.

ಮೂಲಶಿಕ್ಷಣ, ಬಾಲಶಿಕ್ಷಣ, ಹಿಂದಿ ಪ್ರಚಾರ(ರಾಷ್ಟ್ರ ಭಾಷಾ ಪ್ರಚಾರ), ಹಿಂದೂ ಸ್ಥಾನೀ ಸೇವಾದಳ, ಸರ್ವೋದಯ–ಗಾಂಧೀ ಸಾಹಿತ್ಯ ರಚನೆ ಇವೇ ಮುಂತಾದ ರಚನಾತ್ಮಕ ಕಾರ್ಯಗಳಲ್ಲಿ ಅವರಿಗೆ ಗೀಳು, ಆ ಸಂಸ್ಥೆಗಳ ಸಂಬಂಧ. ಅಂತೂ ಅವರು ವ್ಯಾಪಕರು. ಇವೆಲ್ಲ ಕಾರ್ಯಗಳಲ್ಲಿ ನೈಪುಣ್ಯವಿತ್ತು, ಆದರೆ ತೋರಿಕೆ ಇರಲಿಲ್ಲ.

ಭೂದಾನ ಚಳುವಳಿ ವ್ಯಾಪಿಸುತ್ತಿದ್ದ ಕಾಲ, ಕೋಟೆ ಖಾದಿ ವಸ್ತ್ರಾಲಯ ಒಂದು ಸಹಜ ಸಂಪರ್ಕ ಕೇಂದ್ರವಾಗಿತ್ತು. ಕೊನೆಯ ಕೊಠಡಿಯಲ್ಲಿ ಭೂದಾನ ಚಳುವಳಿಯ ಕಾರ್ಯಾಲಯ ನಡೆಯುತ್ತಿತ್ತು. ಕಾರ್ಯಾಲಯದಲ್ಲಿ ಶ್ರೀನಿವಾಸ್‌ರಾವ್, ಪ್ರಿಯವ್ರತ, ಆರ್ಯಭಾನು, ನಾನು ಮತ್ತು ಬೇರೆ ಒಬ್ಬೊಬ್ಬ ಕಾರ್ಯಕರ್ತರು ಕೆಲಸ ಮಾಡುತ್ತಿದ್ದೆವು. ಅಲ್ಲಿ ದಿನವಿಡೀ ಕಾರ್ಯ

ನಡೆಯುತ್ತಿತ್ತು. ಇವರಲ್ಲದೆ ಅಲ್ಲಿಗೆ ದಿ. ಸಿದ್ದವನಹಳ್ಳಿ ಕೃಷ್ಣಶರ್ಮರು, ವಿ.ಎಸ್. ನಾರಾಯಣರಾವ್. ತಗಡೂರು ರಾಮಚಂದ್ರರಾವ್, ಖಾದ್ರಿಶಾಮಣ್ಣ, ಬಾ.ಸು.ಕೃಷ್ಣಮೂರ್ತಿ, ಗರುಡಶರ್ಮ ಮತ್ತು ಹಿರಿಯ ಖಾದಿ ಕಾರ್ಯಕರ್ತರಾಗಿದ್ದ ವೆಂಕಟರಮಣ ಅಯ್ಯರ್ ಇವರೂ ನಿತ್ಯವೂ ಬಂದು ಹೋಗುತ್ತಿದ್ದರು. ಶ್ರೀನಿವಾಸರಾಯರು ಸಾಹಿತ್ಯ ಮತ್ತು ಪತ್ರಿಕಾ ವಿಭಾಗ, ನಾನು ಮುಖ್ಯಕಾರ್ಯಾಲಯ ಮತ್ತು ಪಾದಯಾತ್ರಿಕರ ಸಂಬಂಧ–ಸಂಪರ್ಕ ಸ್ವತಃ ಪಾದಯಾತ್ರಿಕನಾಗಿ ಆರ್ಯಭಾನು ಲೆಕ್ಕಪತ್ರ, ದಾನಪತ್ರ, ರಿಜಿಸ್ಟರು, ಚಂದಾದಾರರ ರಿಜಿಸ್ಟರು ಇತ್ಯಾದಿ ವಿಭಾಗ ನೋಡಿಕೊಳ್ಳುವವರಾಗಿ ಇಡೀ ಕಾರ್ಯ ಮತ್ತು ಜವಾಬ್ಧಾರಿಯನ್ನು ಒಟ್ಟುಗೂಡಿ ತೂಗಿಸುತ್ತಿದ್ದೆವು. ನಮ್ಮ ಕಾರ್ಯಾಲಯದಲ್ಲೊಬ್ಬ ಮಂಜುನಾಥ್‌ಭಟ್ಟನೆಂಬ ಒಬ್ಬ ಕೆಲಸಗಾರ ಚಿಕ್ಕಮಗಳೂರು ಕಡೆಯವನು ಬಂದು ಸೇರಿಕೊಂಡ. ಆತ ಖಾದಿಧಾರಿ, ಒಂಟಿಜೀವಿ, ಹೆಚ್ಚೇನೂ ಆಸೆ ಅಪೇಕ್ಷೆಗಳಿಲ್ಲದವನು ನಿಃಸ್ಪೃಹ ವ್ಯಕ್ತಿ. ಆದರೆ ಆಸ್ತಮಾ ಗೂರಲು ಬೇನೆಯಿಂದ ಆಗಾಗ್ಗೆ ನರಳುತ್ತಿದ್ದವನು. ಆತ ಶ್ರೀನಿವಾಸರಾಯರು ವಹಿಸಿದ ಕೆಲಸಮಾಡಿಕೊಂಡು ಅವರ ಮಾರ್ಗದರ್ಶನದಲ್ಲಿ ಹಲವು ತಿಂಗಳು ನಮ್ಮೆಲ್ಲರ ಜೊತೆಗಿದ್ದ. ಕಾರ್ಯಾಲಯದಲ್ಲೇ ಮಲಗುತ್ತಿದ್ದ. ಒಂದು ರಾತ್ರಿ ಆತ ಹಠಾತ್ತನೆ ಕಾರ್ಯಾಲಯದಲ್ಲೇ ತೀರಿಕೊಂಡ. ಒಂದು ಕುದುರೆಗಾಡಿಯಲ್ಲಿ ಶವವನ್ನು ಚಾಮರಾಜಪೇಟೆ ಸ್ಮಶಾನಭೂಮಿಗೆ ಸಾಗಿಸಿದೆವು. ಸಂಜೆ ೫ ಗಂಟೆಗೆ ಅಂತ್ಯಕ್ರಿಯೆಯನ್ನೆಲ್ಲ ಮುಗಿಸಿದೆವು. ಶವದ ಅಗ್ನಿಸ್ಪರ್ಶಕ್ಕೆ ಜೋಡಿಸಿದ ಸೌದೆ ಸ್ವಲ್ಪಹಸಿಯಿದ್ದು, ಅದರಿಂದ ಕಾರ್ಯಮುಗಿಯಲು ತಡವಾಯಿತು. ಎಲ್ಲವೂ ಶಾಂತವಾಯಿತೆಂಬ ಸಮಾಧಾನದ ಕ್ಷಣದಲ್ಲಿ ಶ್ರೀನಿವಾಸರಾವ್ ಮನಸ್ಸು ಹಗುರ ಮಾಡಿಕೊಂಡು "ನಮಗೂ ಹೀಗೆ ಹಸಿ ಸೌದೆ ಹಾಕಿ ಸತಾಯಿಸಬೇಡಿರಪ್ಪ" ಎಂದರು. ಆ ಕ್ಷಣದಲ್ಲಿ ಎಲ್ಲರ ಮನೋಸ್ಥಿತಿ ಹೇಗಿತ್ತೆಂದರೆ ಅವರಿಗೆ ಪೂರ್ಣಭರವಸೆ ಕೊಡುವುದಷ್ಟೇ ಸಾಕಾಗಿತ್ತು.

ಇನ್ನೊಂದು ಸಂಸ್ಮರಣೆ ರಾಷ್ಟ್ರೀಯ ವಿದ್ಯಾಶಾಲೆಗೆ ಸಂಬಂಧಿಸಿದ್ದು. ದಿ॥ಎಚ್.ನರಸಿಂಹಯ್ಯನವರು ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಲಯದ ನಿವಾಸಿ, ಶ್ರೀನಿವಾಸರಾಯರು ನಿಲಯಪಾಲಕರು. ಭಾನುವಾರ ಬೆಳಿಗ್ಗೆ ಕ್ರೀಡಾಂಗಣದಲ್ಲಿ ಆಟಪಾಟಗಳಿಗೇ ಹೆಚ್ಚು ಪ್ರಾಶಸ್ತ್ಯ. ಬೆಳಿಗ್ಗೆ ಉಪಹಾರ ಮುಗಿಸಿ ಕ್ರೀಡಾಂಗಣಕ್ಕೆ ಹೊರಟು ಹೋದರೆ ಹಿಂತಿರುಗುವುದು ಊಟದ ಹೊತ್ತಿಗೇ.

ವಿದ್ಯಾರ್ಥಿನಿಲಯಪಾಲಕ ರಾಯರು ವಿದ್ಯಾರ್ಥಿಸಮೂಹಕ್ಕೆ ವತ್ಸಲರು, ಉದಾರಿ. ಒಂದು ಭಾನುವಾರ ನರಸಿಂಹ್ಮಯ್ಯ ಉಪ್ಪಿಟ್ಟಿನ ಉಪಹಾರ ಮುಗಿಸಿ ಬೇಗನೇ ಬಂದು ಊಟಹಾಕಿರೆಂದು ಒತ್ತಾಯಿಸಿದರು. ಶ್ರೀನಿವಾಸರಾಯರು, “ಈಗ ತಾನೆ ಮೊರದಷ್ಟು ಉಪ್ಪಿಟ್ಟು ತಿಂದು ಹೋದೆಯಲ್ಲ, ಅದು ಸಾಕಾಗಲಿಲ್ಲವೆ? ಅದು ಹೇಗೆ ಹಸಿವೆ ಆಯಿತಯ್ಯ? ಎಂದು ನಗುತ್ತಲೇ ಕೇಳಿದರು.” “ಉಪ್ಪಿಟ್ಟು ಉಪಹಾರದ ಚೀಲಕ್ಕೆ ಹೋಯಿತು ಊಟದ ಚೀಲ ಖಾಲಿಯೇ ಇದೆಯಲ್ಲ, ಸಾರ್” ಎಂದುತ್ತರ ನರಸಿಂಹಯ್ಯನವರಿಂದ ಬಂತು. ಇದೇ ‘ಗುರು ಶಿಷ್ಯಯೋಃ ಕಥಾವಾಹಃ!’ ಶ್ರೀನಿವಾಸರಾಯರು ಇದನ್ನು ಹಾಸ್ಯಮಯವಾಗಿ ಸ್ವಾರಸ್ಯವಾಗಿ ಹೇಳುತ್ತಿದ್ದರು. ಇಂಥ ಸಂಸ್ಮೃತಿಗಳನ್ನು ಕೇಳಿದಾಗಲೆ ನಮ್ಮಂಥವರಿಗೆ ಇಬ್ಬರ ವಿಷಯದಲ್ಲೂ ಹೆಮ್ಮೆ ಮತ್ತು ಹರ್ಷದ ಅನುಭವವಾಗುತ್ತಿತ್ತು.

ಶ್ರೀನಿವಾಸರಾಯರ ಹೆಸರು ಕೇಳುತ್ತಲೇ ಮತ್ತೊಂದು ದೃಶ್ಯದ ನೆನಪಾಗುತ್ತದೆ. ೧೯೬೯ ರವರೆಗೆ ನಡೆಯುತ್ತಿದ್ದ ಪ್ರತ್ಯಕ್ಷ ಘಟನೆ, ಈಗಲೂ ಕಣ್ಮುಂದೆ ನಿಲ್ಲುತ್ತಿರುವ ಜೀವಂತ ಚಿತ್ರವದು. ಸಂಬಂಧಪಟ್ಟ ವ್ಯಕ್ತಿಗಳಿಬ್ಬರೂ ಇಂದು ನಮ್ಮ ಮಧ್ಯೆಇಲ್ಲ, ಆದ್ದರಿಂದ ಅದು ಕೇವಲ ಸ್ಮೃತಿ ಚಿತ್ರ. ದಿ॥ ಸಿದ್ದವನಹಳ್ಳಿ ಕೃಷ್ಣಶರ್ಮರು ಮತ್ತು ದಿ॥ ಶ್ರೀನಿವಾಸರಾಯರಿಬ್ಬರೂ ಎದುರು-ಬದುರು ಕುಳಿತು ಸಾಹಿತ್ಯ ರಚನೆಯಲ್ಲಿ ತೊಡಗಿರುತ್ತಿದ್ದ ದೃಶ್ಯ. ಕೃಷ್ಣಶರ್ಮರು ಸರ್ವೋದಯದ ವೇದವ್ಯಾಸರು, ಶ್ರೀನಿವಾಸರಾವ್ ಗಣಪತಿ! ಶರ್ಮರು ಹಿಂದಿಪುಸ್ತಕ ಹಿಡಿದು ಅದನ್ನು ಕನ್ನಡಕ್ಕೆ ಅನುವಾದ ಮಾಡಿ ಹೇಳುತ್ತಾ ಹೋಗುತ್ತಿದ್ದುದು, ಶ್ರೀನಿವಾಸರಾವ್ ಅದನ್ನು ಬರೆದುಕೊಳ್ಳುತ್ತಾ ಇದ್ದುದು ಆಗಿನ ಸರ್ವೋದಯ ಕಾರ್ಯಾಲಯದಲ್ಲಿ ನೋಡಬಹುದಾಗಿದ್ದ ಸಾಮಾನ್ಯ ಮತ್ತು ಸರಿಸುಮಾರು ನಿತ್ಯದ ದೃಶ್ಯ. ನಡುನಡುವೆ ಅನುವಾದ ಕಾರ್ಯನಿಂತು, ಇಬ್ಬರು ಗಹನ ಸಂವಾದ, ವಿಚಾರ ವಿನಿಮಯಕ್ಕಿಳಿಯುತ್ತಿದ್ದರು. ಹಿಂದಿಯಲ್ಲಿದ್ದ ಅನೇಕ ಮೂಲ ಸಾಹಿತ್ಯ ಕನ್ನಡಕ್ಕೆ ಅನುವಾದವಾಗಿ ಪ್ರಕಟವಾದುದು ಹೀಗೆಯೇ. ಇಬ್ಬರ ಪರಿಶ್ರಮದಿಂದ ಸರ್ವೋದಯ ವಿಚಾರದ ಪ್ರಕಾಶನ ಮತ್ತು ಪತ್ರಿಕಾವಿಭಾಗಗಳು ಬೆಳೆದು ನಿಂತವು. ಶ್ರೀನಿವಾಸರಾವ್ ಇದಕ್ಕೆಲ್ಲ ಆಧಾರಸ್ಥಂಭವಾಗಿದ್ದರು.

ಶ್ರೀನಿವಾಸರಾವ್ ಮದುವೆಯಾಗಿ ಸಂಸಾರ ಹೂಡಿದವರಲ್ಲ. ಸ್ವಲ್ಪ ದೂರದ ಸಂಬಂಧದ ತಂಗಿಯೊಬ್ಬರು ಬೇಗ ವಿಧವೆಯಾಗಿ ತನ್ನ ಇಬ್ಬರು

ಮಕ್ಕಳನ್ನು ಕಟ್ಟಿಕೊಂಡು ಬಂದು ಅಣ್ಣನಿಗೆ ಗಂಟುಬಿದ್ದರು. ಸರಿ, ತಂಗಿಯ ಸಂಸಾರ ನಿಭಾಯಿಸುತ್ತಾ ಅವರ ಉದ್ಧಾರಕ್ಕಾಗಿ ನಿಂತುಬಿಟ್ಟರು ಎನ್ನಬಹುದು. ಶಂಕರಮಠದ ರಸ್ತೆಯಲ್ಲಿದ್ದ ರಂಗನಾಥ ಇನ್ಸಿಟಿಟ್ಯೂಟಿನ ಮಹಡಿಯ ಮುಂಗೊಟ್ಟಿನ ಮೇಲೆ ಮಲಗೇಳುತ್ತಿದ್ದ ಈ ಒಂಟಿ ಜೀವಿ ಶುದ್ಧ ಸಂಸಾರಿಯಾದರು. ಅದನ್ನೂ ಚೊಕ್ಕವಾಗಿ ನಡೆಸಿದರು. ಆ ಸಂಸಾರವನ್ನು ಮೇಲಕ್ಕೆತ್ತಿ ಅವರಿಗೊಂದು ಉತ್ತಮ ಸೂರನ್ನು ನಿರ್ಮಿಸಿ ತಾವೂ ಹತ್ತಾರು ವರ್ಷ ಅದರಲ್ಲಿ ಬಾಳಿ ಬದುಕಿ ತಮ್ಮ ಪಾಲಿಗೆ ಬಂದ ಜವಾಬ್ದಾರಿಯನ್ನು ನಿರ್ವಹಿಸಿದ ವಿಶಾಲ ಹೃದಯಿ.

ವ್ಯವಸ್ಥೆ, ಕ್ರಮವರಿತನಡವಳಿಕೆಗೆ, ಒಪ್ಪ–ಓರಣಕ್ಕೆ, ಅಚ್ಚುಕಟ್ಟು–ಸ್ವಚ್ಛತೆ–ಸಂಯಮಕ್ಕೆ, ಶಿಸ್ತು, ಸಮಯಪಾಲನೆಗಳ ಇನ್ನೊಂದು ಹೆಸರು ಶ್ರೀನಿವಾಸರಾವ್.ಸ ಅವರೇ ಕಸಗುಡಿಸುವವರು, ಲೆಕ್ಕಿಗರು, ಅವರೇ ಪ್ರೆಸ್‌ಪ್ರತಿ ತಿದ್ದುವವರು, ಸಾಹಿತ್ಯ ಮಾರಾಟಗಾರರು, ವ್ಯವಸ್ಥಾಪಕರು, ಲೇಖಕ–ಗ್ರಂಥಕರ್ತರು, ಅವರೇ ಭಾಷಣಕಾರರು ಇವೆಲ್ಲವನ್ನೂ ಅಚ್ಚುಕಟ್ಟಾಗಿ ಮಾಡಿ ಮುಗಿಸುವವರು. ಅವರ ಮೇಲೆ ಅವರ ಜೀವನಕ್ರಮದ ಮೇಲೆ ಮೂಲಶಿಕ್ಷಣದ ಗಹನ ಪ್ರಭಾವ ಆಗಿತ್ತು. ಅವರ ಈ ಗುಣಗಳಿಂದಾಗಿ ಥಕ್ಕರ್‌ಬಾಪಾರವರಿಗೂ ಅಚ್ಚು ಮೆಚ್ಚಿನವರಾದರು. ಅವರ ಕಾರ್ಯದರ್ಶಿಯಾಗಲು ಒತ್ತಡ ಬಂದಿತ್ತು ಸ್ವಲ್ಪದಿನ ಆ ಕೆಲಸ ಮಾಡಿದ್ದೂ ಆಯಿತು, ಆದರೆ ಕಾರಣಾಂತರದಿಂದ ಈ ಸಂಬಂಧ ಮುಂದುವರಿಯಲಿಲ್ಲ.

ಶ್ರೀನಿವಾಸರಾಯರದು ತಟಸ್ಥ ವೃತ್ತಿ, ಸೂಕ್ಷ್ಮನಿರೀಕ್ಷಣೆ, ಮತ್ತು ಸಮ್ಯಗ್ವಿಚಾರ ಶಕ್ತಿಯ ಸಂಸ್ಕಾರ ಪಡೆದವರಾದ್ದರಿಂದ ಅವರು ವಿವೇಕಯುಕ್ತ ಸಲಹೆಕೊಡಬಲ್ಲವರಾಗಿದ್ದರು.

ಎಲೆಮರೆಯ ಕಾಯಿಯಂತೆ ಬಾಳಿ ಬದುಕಿದ ಅಪರೂಪದ ವ್ಯಕ್ತಿ ಶ್ರೀನಿವಾಸರಾವ್ ಎಂದರೆ ಅವರಿಗೆ ಅದು ಒಪ್ಪುತ್ತದೆ. 'ಎಲೆಮರೆಯ ಕಾಯಿ' ಎನ್ನುವುದು ಭಾಷಾನುಡಿಗಟ್ಟಿನ ಪದಪುಂಜವಷ್ಟೇ. ಶಬ್ದಾರ್ಥಹಿಡಿದು ಹೋದರೆ ಅವರನ್ನು ಯಾರಾದರೂ 'ಕಾಯಿ' ಎಂದಾರೆ? ಅವರು ಪರಿಪಕ್ವಚಿತ್ತ.

* * * *

ಹಕ್ಕಿಹಾರುತಿದೆ ನೋಡಿದಿರಾ !

–ಹಾಲ್ದೊಡ್ಡೇರಿ ಸುಧೀಂದ್ರ

ವಿಮಾನದ ಎಂಜಿನ್ ತಂತ್ರಜ್ಞಾನ ಕ್ಷೇತ್ರದಲ್ಲಿ ಇತ್ತೀಚಿಗೆ ಹೊಸತೊಂದು ದಾಖಲೆ ಸೃಷ್ಟಿಯಾಗಿದೆ. ಮೊದಲ ಬಾರಿಗೆ ಸಾಮಾನ್ಯ ಇಂಧನ ಬಳಸುವ ಜೆಟ್ ಎಂಜಿನ್ ಒಳಗೊಂಡ ವಿಮಾನವೊಂದು ಮ್ಯಾಕ್ ಸಂಖ್ಯೆ ಏಳರ ಗಡಿ ದಾಟಿದೆ. ಅಮೇರಿಕದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ 'ನಾಸಾ' ಆಗಸಕ್ಕೆ ತೂರಿಬಿಟ್ಟ ಎಕ್ಸ್–೪೩ಎ ವಿಮಾನ ಗಂಟೆಗೆ ೮೦೦೦ ಕಿಲೋಮಿಟರ್ ವೇಗವನ್ನು ಯಶಸ್ವಿಯಾಗಿ ದಾಟಿದೆ. ವಿಮಾನವೊಂದು ಮುನ್ನುಗ್ಗಿ ಧಾವಿಸುವ ವೇಗವನ್ನು ಸಾಮನ್ಯವಾಗಿ 'ಮ್ಯಾಕ್' ಅಳತೆಯಲ್ಲಿ ಗುರುತಿಸಲಾಗುತ್ತದೆ. ಶಬ್ದ ಕ್ರಮಿಸುವ ವೇಗವಾದ ಸೆಕೆಂಡಿಗೆ ೩೩೦ ಮೀಟರ್ ಅಥವಾ ಗಂಟೆಗೆ ೧೨೦೦ ಕಿಲೋಮೀಟರ್ ವೇಗವು ಈ ಮಾಪನದಲ್ಲಿ ಒಂದು 'ಮ್ಯಾಕ್' ಆಗುತ್ತದೆ. ಈ ಲೆಕ್ಕಾಚಾರದಲ್ಲಿ ವಿಮಾನವು ಹೆಚ್ಚೂ–ಕಮ್ಮಿ ಏಳು 'ಮ್ಯಾಕ್' ವೇಗದಲ್ಲಿ ಹಾರಾಟ ನಡೆಸಿದೆ. ವಿಮಾನವು ಇಷ್ಟೊಂದು ವೇಗದಿಂದ ಹಾರಲು ಶಕ್ತಿ ಒದಗಿಸಿದ ಕೀರ್ತಿ ಅದರೊಡಲೊಳಗಿದ್ದ ವಿನೂತನ ಎಂಜಿನ್‌ನದು. ಮಕ್ಕಳು ಪಟಾಕಿಯ ರಾಕೆಟ್‌ಗಳನ್ನು ಹಚ್ಚಿಬಿಡುವಷ್ಟೇ ಸುಲಭದಲ್ಲಿ ಇಂದು ಆಗಸಕ್ಕೆ ರಾಕೆಟ್‌ಗಳನ್ನು ತೂರಿಬಿಡಲಾಗುತ್ತಿದೆ. ಇಷ್ಟೊಂದು ಮುಂದುವರಿದಿರುವ ಇಂದಿನ ತಂತ್ರಜ್ಞಾನ ಯುಗದಲ್ಲಿ ಏಳು ಮ್ಯಾಕ್ ವೇಗದ ಉಡ್ಡಯಣೆ ಭಾರಿಯದೇನಲ್ಲ. ಹಾಗಿದ್ದರೆ 'ನಾಸಾ' ಎಷ್ಟೊಂದು ಸಂಭ್ರಮ ಪಡಲು ಕಾರಣವೇನು? ಎಂಬ ಪ್ರಶ್ನೆ ನಿಮ್ಮಲ್ಲಿ ಮೂಡಿರಬಹುದು.

ರಾಕೆಟ್ ಆಗಲಿ ವಿಮಾನವಾಗಲಿ ಮುನ್ನುಗ್ಗಿ ಧಾವಿಸುವುದು 'ಜೆಟ್ ಪ್ರತಿಕ್ರಿಯೆ'ಯಿಂದ. ಗಾಳಿ ತುಂಬಿದ ಬೆಲೂನನ್ನು ಬಿಟ್ಟರೆ ಹಿನ್ನುಗ್ಗುವ ಒತ್ತಡದ ಗಾಳಿ ಬೆಲೂನನ್ನು ಮುಂದೆ ಸಾಗುವಂತೆ ಮಾಡುವ ತಂತ್ರಜ್ಞಾನ ನಿಮಗೆ ಗೊತ್ತು. ಹಾರುವ ಯಂತ್ರಗಳಿಗೆ 'ನೂಕುಬಲ'ವನ್ನು ನೀಡುವ ಹೊಣೆಗಾರಿಕೆ ಎಂಜಿನ್‌ಗಳದು. ಈ ಎಂಜಿನ್‌ಗಳಲ್ಲಿ ಗಾಳಿಯನ್ನು ಒತ್ತಡಕ್ಕೊಳಪಡಿಸಿ, ದಹನ ಯಂತ್ರದಲ್ಲಿ ಉರಿಯುವ ಇಂಧನಕ್ಕೆ ಅದನ್ನು ಉಣಬಡಿಸಿ, ಅಪಾರ ಶಕ್ತಿಯ ಅನಿಲವನ್ನು ಹೊರಚಿಮ್ಮುವಂತೆ ಮಾಡಲಾಗುತ್ತದೆ. 'ನ್ಯೂಟನ್‌ನ ಮೂರನೆಯ ನಿಯಮ'ದಂತೆ ಇಂಥ ಅನಿಲದ ಹೊರಚಿಮ್ಮುವ ಕ್ರಿಯೆಗೆ ಪ್ರತಿಕ್ರಿಯೆಯಾಗಿ ವಿಮಾನ ಅಥವಾ ರಾಕೆಟ್ ಮುಂದೆ ಧಾವಿಸುತ್ತದೆ. ಭೂಮಂಡಲದಲ್ಲಿ ಮೇಲೇರಿದಂತೆ ವಾತಾವರಣ ತಿಳಿಯಾಗುತ್ತಾ ಬರುವುದು ಪ್ರಕೃತಿ ನಿಯಮ.

ವಿಮಾನವಾಗಲಿ, ರಾಕೆಟ್ ಆಗಲಿ ಬಹು ಎತ್ತರಕ್ಕೇರಿದಾಗ ಕಮ್ಮಿಯಾಗುವ ಗಾಳಿಯ ಸಾಂದ್ರತೆಯಿಂದ ಇಂಧನ ದಹನಕ್ರಿಯೆ ಪೂರ್ಣವಾಗುವುದಿಲ್ಲ. ಇಂಥದೊಂದು 'ಉಸಿರಾಟ'ದ ತೊಂದರೆಯಿಂದಾಗಿ ಎಂಜಿನ್‌ನ ನೂಕುಬಲ ಕಮ್ಮಿಯಾಗತೊಡಗುತ್ತದೆ. ಈ ಕಾರಣದಿಂದ ವಿಮಾನ ಹಾರುವ ಎತ್ತರಕ್ಕೆ ಒಂದು ಮಿತಿಯನ್ನು ನಿಗದಿಪಡಿಸಲಾಗಿದೆ. ವಾತಾವರಣದ ಗಾಳಿಯನ್ನು ಬಳಸಿಕೊಳ್ಳುವ ಜೆಟ್ ಎಂಜಿನ್ ಆಧಾರಿತ ವಿಮಾನಗಳ ಹಾರಾಟ ಸಾಮಾನ್ಯವಾಗಿ ನೆಲದಿಂದ ೧೮ ಕಿಲೋಮೀಟರ್ ಎತ್ತರಕ್ಕೆ ಸೀಮಿತ. ಈ ಮಿತಿಯನ್ನು ದಾಟಿ ಹಾರಬೇಕಾದ ನೌಕೆಗಳು ದಹನಕ್ರಿಯೆಗೆ ಬೇಕಾದ ಆಮ್ಲಜನಕವನ್ನು ತಾವೇ ಹೊತ್ತೊಯ್ಯುತ್ತವೆ. ಆಮ್ಲಜನಕವೂ ಸೇರಿರುವ ಇಂಥ ಇಂಧನವನ್ನು 'ಪ್ರೊಪೆಲೆಂಟ್'ಗಳೆಂದು ಕರೆಯಲಾಗುತ್ತದೆ.

ಆಮ್ಲಜನಕ ಮಿಳಿತವಾದ ಪ್ರೊಪೆಲೆಂಟ್‌ಗಳ ನಿರ್ವಹಣೆ ಎಣಿಸಿದಷ್ಟು ಸುಲಭವಲ್ಲ. ಜತೆಗೆ ವಿಮಾನಗಳ ಸಾಮಾನ್ಯ ಇಂಧನಕ್ಕಿಂತಲೂ ಬೆಲೆಯಲ್ಲಿ ತುಟ್ಟಿ. ಇದರ ಬಗ್ಗೆ ಸಾಕಷ್ಟು ಚಿಂತಿಸುತ್ತಿದ್ದ ಬಾಹ್ಯಾಕಾಶ ತಂತ್ರಜ್ಞರಿಗೆ ವಿಮಾನವೊಂದು ವೇಗವಾಗಿ ಧಾವಿಸುವಾಗ ಎದುರಾಗುವ ಗಾಳಿಯ ಬಗ್ಗೆ ಕುತೂಹಲವಿತ್ತು. ವೇಗದಿಂದ ಧಾವಿಸುವ ಈ ಗಾಳಿಯನ್ನು ಮತ್ತಷ್ಟು ವೇಗೋತ್ಕರ್ಷಕ್ಕೊಳಪಡಿಸಿ ನೂಕುಬಲ ಸೃಷ್ಟಿಸಲು ಪ್ರಯೋಗಗಳನ್ನು ನಡೆಸತೊಡಗಿದರು. ತಿರುಗಣಿ ಮಡುವಿನಲ್ಲಿ ಸಿಲುಕಿದ ಗಾಳಿಯು ಗುದ್ದಾಟದಿಂದ 'ರಭಸದಿಂದ ಹೊರಚಿಮ್ಮುವ ಗಾಳಿ'ಯಾಗುವ(ರ್‍ಯಾಮ್ ಏರ್) ಸೋಜಿಗವನ್ನು ಕಂಡರು.

ಇದೇ ತತ್ವದಿಂದ ಕೆಲಸ ಮಾಡುವ 'ರ್‍ಯಾಮ್ ಜೆಟ್' ಎಂಜಿನ್‌ಗಳು ಬೆಳಕಿಗೆ ಬಂದವು. ಕಾರ್ಯಕ್ಷಮತೆಯ ದೃಷ್ಟಿಯಿಂದ ಈ ಎಂಜಿನ್‌ಗಳು ಅಷ್ಟೇನೂ ಜನಪ್ರಿಯವಾಗಲಿಲ್ಲ. ಶಬ್ದದ ವೇಗಕ್ಕಿಂತ ಹೆಚ್ಚಿನ ವೇಗದಲ್ಲಿ ನೌಕೆಯನ್ನು ಮುನ್ನಡೆಸಲು ಮತ್ತಷ್ಟು ಪ್ರಬಲವಾದ ಎಂಜಿನ್‌ಗಳ ಅಗತ್ಯವಿತ್ತು. 'ರ್‍ಯಾಮ್ ಜೆಟ್' ಎಂಜಿನ್‌ಗಳಿಗೆ ಇಂಧನ ದಹನದ ಶಕ್ತಿಯನ್ನು ಪೂರಕವಾಗಿಸಿದರೆ ನೌಕೆಗಳು ಶಬ್ದದ ವೇಗವನ್ನು ಸುಲಭವಾಗಿ ದಾಟಬಹುದೆಂಬ ಕಲ್ಪನೆ ಚಿಗುರೊಡೆಯಿತು. ಇಂಥ ಸಮಯದಲ್ಲಿ ಸೃಷ್ಟಿಯಾದುದ್ದೇ 'ಸೂಪರ್ ಸಾನಿಕ್‌ಕಂಬಶನ್ ರ್‍ಯಾಮ್ ಜೆಟ್' ಅರ್ಥಾತ್ 'ಸ್ಕ್ರಾಮ್ ಜೆಟ್' ಎಂಜಿನ್. ತಂತ್ರಜ್ಞರು ಕಂಡು ಕೊಂಡಂತೆ ಮ್ಯಾಕ್ ಸಂಖ್ಯೆ ಐದನ್ನು ದಾಟುವಂಥ ನೌಕೆಗಳಲ್ಲಿ ಮಾತ್ರ ಇಂಧನ ದಹನಕ್ಕೆ ಅಗತ್ಯವಿರುವಷ್ಟು 'ರ್‍ಯಾಮ್' ಗಾಳಿ ಸಿಗಲಿದೆ.

'ನಾಸಾ' ನೇತ್ರತ್ವದ 'ಹೈಪರ್-ಎಕ್ಸ್' ಎಂಬ ಬೃಹತ್ ಯೋಜನೆಯಲ್ಲಿ ಹೊಸ ಬಗೆಯ ಎಂಜಿನ್ ತಂತ್ರಜ್ಞಾನದ ಅಭಿವೃದ್ಧಿಗೇ ಹೆಚ್ಚು ಒತ್ತು ನೀಡಲಾಗಿದೆ. ವಿಮಾನ ಮತ್ತು ಉಡ್ಡಯನ ನೌಕೆಗಳ ವೇಗವನ್ನು ಸಾಧ್ಯವಾದಷ್ಟು ಹೆಚ್ಚಿಸುವುದೇ

ಈ ಯೋಜನೆಯ ಗುರಿ. ಎಂಟು ವರ್ಷಗಳ ಹಿಂದೆ ಆರಂಭವಾದ 'ಸ್ಕ್ರಾಮ್ ಜೆಟ್ ಎಂಜಿನ್' ಯೋಜನೆಗೆ ಸರಕಾರಿ ಮತ್ತು ಖಾಸಗಿ ಸಂಸ್ಥೆಗಳು ವಿನಿಯೋಗಿಸಿರುವ ಒಟ್ಟು ಹಣ ಇಪ್ಪತ್ತೈದು ಕೋಟಿ ಅಮೇರಿಕನ್ ಡಾಲರ್‌ಗಳು. ಈ ಎಕ್ಸ್-೪೩ಎ ವಿಮಾನ ಮತ್ತು ಎಂಜಿನ್ ಅನ್ನು ಎ.ಟಿ.ಕೆ ಜಿ.ಎ.ಎಸ್.ಎಲ್ ಎಂಬ ಖಾಸಗಿ ಸಂಸ್ಥೆ ನಿರ್ಮಿಸಿದರೆ, ವಿಮಾನದ ಶಾಖ ರಕ್ಷಣಾ ವ್ಯವಸ್ಥೆ ಮತ್ತು ಎಂಜಿನ್ ನಿಯಂತ್ರಣ ವ್ಯವಸ್ಥೆಯನ್ನು ರೂಪಿಸಿದ್ದು ಬೋಯಿಂಗ್ ಸಂಸ್ಥೆ. ಆರ್ಬಿಟಲ್ ಸೈನ್ಸಸ್ ಸಂಸ್ಥೆಗೆ ವಿಮಾನವನ್ನು ತೂರಿಬಿಡಲು ನಿಯೋಜಿಸಿದ್ದ ಪೆಗಾಸಸ್ ರಾಕೆಟ್ ಅನ್ನು ಮಾರ್ಪಡಿಸುವ ಹೊಣೆಗಾರಿಕೆಯಿತ್ತು. ಮೂರು ವರ್ಷಗಳ ಹಿಂದೆ ವಿಮಾನದ ಮೊದಲ ಮಾದರಿಯ ಪರೀಕ್ಷಾರ್ಥ ಹಾರಾಟವು ವಿಫಲವಾಗಿತ್ತು. ತೂರಿ ಬಿಟ್ಟ ಕ್ಷಣದಲ್ಲೇ ಆಸ್ಫೋಟಕ್ಕೆ ಬಲಿಯಾಗಿತ್ತು.

ಹಿಂದಿನ ವೈಫಲ್ಯಕ್ಕೆ ಕಾರಣಗಳೇನೆಂದು ಕಂಡುಕೊಂಡಿದ್ದ 'ನಾಸಾ' ನೂರಾರು ಕಂಪ್ಯೂಟರ್ ಮಾದರಿಗಳನ್ನು ಪರಿಶೀಲನೆಗೊಳಪಡಿಸಿತ್ತು. ಅನೇಕ ಮಾದರಿಗಳನ್ನು ವಾಯುಸುರಂಗದಲ್ಲಿ ತೀವ್ರ ಪರೀಕ್ಷೆಗೊಳಪಡಿಸಿತ್ತು. ಈ ಬಾರಿಯ ಹಾರಾಟಕ್ಕೆ ಅಷ್ಟೊಂದು ಅಬ್ಬರದ ಪ್ರಚಾರ ಕೊಟ್ಟಿರಲಿಲ್ಲ. ಬೃಹತ್ ಬಾಂಬರ್ ವಿಮಾನ-೫೨ ಮೇಲೇರಿದಂತೆ ಕ್ಷಣಗಣನೆ ಪ್ರಾರಂಭವಾಯಿತು. ತೆಕ್ಕೆಯಲ್ಲಡಗಿದ್ದ ಪುಟಾಣಿ ವಿಮಾನವು ಥೇಟ್ ಕ್ಷಿಪಣಿಯಂತೆ ಹೊರ ಚಿಮ್ಮಿದ ಸುದ್ದಿ ಬಂದಂತೆ ತಂತ್ರಜ್ಞರ ಎದೆಬಡಿತ ಹೆಚ್ಚಾಗುತ್ತಾ ಬಂತು. ಪುಟಾಣಿ ವಿಮಾನ ಹೊರಬಿದ್ದರೂ ಮಾತ್ರ ವಿಮಾನ ಕಿಂಚಿತ್ತೂ ಅಲುಗಾಡಲಿಲ್ಲ. ಗಾಳಿ ಗೊಡ್ಡಿಕೊಂಡ ಕಿರು ವಿಮಾನದೊಳಗೆ ಚಟುವಟಿಕೆ ಆರಂಭವಾಯಿತು. ಇಂಧನದ ದಹನಕ್ಕೆ ಅಗತ್ಯವಾದಷ್ಟು ಆಮ್ಲಜನಕ ಸಿಕ್ಕಿದೆಯೆಂದು ಖಾತರಿಯಾದೊಡನೆ, ಗಾಳಿ ಕಳುಹಿಸುತ್ತಿದ್ದ ಕವಾಟಗಳು ಮುಚ್ಚಿಕೊಂಡವು. ನಿಯಂತ್ರಣ ವ್ಯವಸ್ಥೆ ಕಾರ್ಯ ಶುರುಹಚ್ಚಿಕೊಂಡಿತು. ಒಳಗಿದ್ದ ಅಲ್ಪ ಪ್ರಮಾಣದ ಜಲಜನಕಕ್ಕೆ ಒತ್ತಡಕ್ಕೊಳಪಟ್ಟ ಗಾಳಿ ಸೋಕಿ, ದಹನಕ್ರಿಯೆ ಆರಂಭವಾಯಿತು. ಕೇವಲ ಹತ್ತು ಸೆಕೆಂಡುಗಳ ಕಾಲ ಮಾತ್ರ ಕಾರ್ಯನಿರ್ವಹಿಸಿದ ಎಂಜಿನ್, ಹನ್ನೆರಡು ಅಡಿ ಉದ್ದದ ಪೈಲಟ್ ರಹಿತ ಎಕ್ಸ್-೪೩ಎ ವಿಮಾನಕ್ಕೆ ವೇಗೋತ್ಕರ್ಷ ನೀಡಿತು. ಇಂಥದೊಂದು ಬೃಹತ್ ಚಾಲಕ ಶಕ್ತಿ ಸಿಕ್ಕ ವಿಮಾನವು ಕೆಲಕ್ಷಣದಲ್ಲೇ ಮ್ಯಾಕ್ ಸಂಖ್ಯೆ ಏಳರ ವೇಗವನ್ನು ಮುಟ್ಟಿತು. ಈ ಮೂಲಕ ಎಂಜಿನ್ ಕಾರ್ಯನಿರ್ವಹಣೆಯ ಪರೀಕ್ಷೆ ಮುಗಿದಂತಾಯಿತು. ಮುಂದಿನದು ವಿಮಾನ ನಿಯಂತ್ರಣದ ಬಗ್ಗೆ ಪರಿಶೀಲನೆ. ಮೇಲೇರಿ, ಇಳಿದು, ಅಂಕು-ಡೊಂಕಿನ ಹಾದಿ ಕ್ರಮಿಸಿ ಎಣಿಕೆಯಂತೆ ಶಾಂತ ಸಾಗರದ ನಿರ್ದಿಷ್ಟ ನೆಲೆಗೆ ಧುಮುಕಿತು.

ಈ ಯೋಜನೆಗೆ, ಅದರ ಯಶಸ್ಸಿಗೆ ಏಕಿಷ್ಟು ಪ್ರಚಾರ ಸಿಗುತ್ತದೆ? ಎಂಬ ಅನುಮಾನ ನಿಮಗಷ್ಟೇ ಅಲ್ಲ, ನನಗೂ ಇದೆ. 'ನಾಸಾ'ದ ವೆಬ್‌ಸೈಟಿನಲ್ಲಿ

ಬರೆದಿರುವಂತೆ ಇದೇ ಮೊದಲ ಬಾರಿಗೆ ರಾಕೆಟ್ ನೆರವಿನಿಂದ ಮೊದಲು ಚಿಮ್ಮಿ, ನಂತರ ಸಿಕ್ಕ ರಭಸದ ಗಾಳಿಯನ್ನು ಸೆಳೆದು, ಸಾಮಾನ್ಯ ಇಂಧನವನ್ನು ದಹಿಸಿ ಕಲ್ಪನೆಗೂ ಸಿಗದ ವೇಗಕ್ಕೆ ವಿಮಾನವನ್ನು ಮುಟ್ಟಿಸುವುದಿದೆಯಲ್ಲ, ಅದು ಸುಲಭವಲ್ಲ. ಅಂಥ ಸಾಹಸದ ಬಗ್ಗೆ ಯಾರೂ ಯೋಚನೆ ಮಾಡಿರಲಿಲ್ಲ. ಗಾಳಿಯೇ ಚಾಲಕ ಶಕ್ತಿಯಾಗಿರುವುದರಿಂದ ಸಾಮಾನ್ಯ ಎಂಜಿನ್‌ಗಳಲ್ಲಿರುವಂತೆ 'ಸ್ಕ್ರಾಂಜೆಟ್' ಎಂಜಿನ್‌ಗಳಲ್ಲಿ ಸರಿದಾಡುವ ಇಲ್ಲವೆ ತಿರುಗಾಡುವ ಬಿಡಿಭಾಗಗಳಿರುವುದಿಲ್ಲ. ಅವುಗಳ ನಿರ್ವಹಣೆಯ ರೇಜಿಗೆಯೂ ಇರುವುದಿಲ್ಲ. ಸೆಕೆಂಡೊಂದರ ದಶಲಕ್ಷದ ಒಂದು ಭಾಗದ ಅವಧಿಯಲ್ಲಿ ಇಂಧನಕ್ಕೆ ಕಿಡಿ ತಲುಪಿ, ಕೆಲವೇ ಸೆಕೆಂಡುಗಳಲ್ಲಿ ದಹನಕ್ರಿಯೆ ಪೂರ್ಣವಾಗಿ ಅಪಾರ ಶಕ್ತಿ ಬಿಡುಗಡೆಯಾಗುವುದು ನಿಜಕ್ಕೂ ಒಂದು ಎಂಜಿನಿಯರಿಂಗ್ ಸೋಜಿಗವೇ ಸೈ.

ರಾಕೆಟ್ ವೇಗದ ಪಯಣವನ್ನು ವಿಮಾನದಲ್ಲೇ ಮಾಡಿ ಮುಗಿಸುವ ಇಂಥದೊಂದು ಯೋಜನೆಗೆ ಅಮೇರಿಕದ ಮಿಲಿಟರಿ ಹಣದ ಹೊಳೆ ಹರಿಸುತ್ತಿದೆ. ಅತ್ಯಂತ ಅಗ್ಗದ ದರದಲ್ಲಿ ಉತ್ಕೃಷ್ಟ ವೇಗವನ್ನು ತಲುಪುವ ಈ ಸವಾಲು ಎಂಜಿನಿಯರಿಂಗ್ ಕೌಶಲದ ಪ್ರದರ್ಶನಕ್ಕೆ ಮಾತ್ರ ಮೀಸಲಾಗಿಲ್ಲ. ಅಮೇರಿಕದ ಯಾವದೇ ನೆಲೆಯಿಂದ ಪಯಣಿಗರನ್ನು ಜಗತ್ತಿನ ಯಾವುದೇ ಮೂಲೆಗೆ ಕೇವಲ ಎರಡು ಗಂಟೆಯೊಳಗೆ ತಲುಪಿಸಬೇಕೆಂಬ ಹಂಬಲ ಈ ಯೋಜನೆಯ ಹಿಂದಿದೆ. ಅಂದರೆ ಇಂಥ ವಿಮಾನಗಳ ಮೂಲಕ ಎರಡೇ ಗಂಟೆಯಲ್ಲಿ ಎಲ್ಲಿ ಬೇಕಾದರೂ ಬಾಂಬ್‌ಗಳನ್ನು ತೂರಿ ಸುರಕ್ಷಿತವಾಗಿ ಹಿಂದಿರುಗಬಹುದಲ್ಲವೆ? ಎಂಬ ಯೋಚನೆ ಅಮೇರಿಕದ ಮಿಲಿಟರಿಗಿದೆ. ಸದ್ಯಕ್ಕೆ ಚಿಂತೆ ಬೇಡ. ಇಂಥ ವಿಮಾನಗಳ ದಂಡು ನಿಲ್ದಾಣಗಳತ್ತ ಮುಗಿಬೀಳಲು ಕನಿಷ್ಠ ಎರಡು ದಶಕಗಳಾದರೂ ಬೇಕು.

ಭವಿಷ್ಯತ್ತಿನಲ್ಲಿ ವಿಮಾನ ಪಯಣದ ನಮ್ಮ ಇಂದಿನ ಕಲ್ಪನೆಗಳೆಲ್ಲ ನುಚ್ಚು ನೂರಾಗಲಿವೆ. ಈ ನಿಟ್ಟಿನಲ್ಲಿ ಪೂರಕ ತಂತ್ರಜ್ಞಾನಗಳು ಸ್ಕ್ರಾಮ್ ಜೆಟ್ ಎಂಜಿನ್‌ನಿಂದ ಹೊರಚಿಮ್ಮುವ ಗಾಳಿಯಷ್ಟೇ ರಭಸದಿಂದ ಬಳಕೆಗೆ ಬರುತ್ತಿವೆ.

ಸಾಭಾರ : ವಿಜಯ ಕರ್ನಾಟಕ

ದ್ವಂದ್ವಗ್ರಸಿತ ಶಿಕ್ಷಣ

–ಸತ್ಯವ್ರತ.

ನಮ್ಮ ಶಿಕ್ಷಣ ಕ್ಷೇತ್ರ ಬಹು ವಿಶಾಲವಾಗಿ ಬೆಳೆದಿದೆ. ಏಳೂವರೆ ಲಕ್ಷಕ್ಕೂ ಮೀರಿದ ವಿದ್ಯಾಲಯಗಳು, ಅವುಗಳಲ್ಲಿ ಅಭ್ಯಾಸಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಸರಿಸುಮಾರು ೧೨ ಕೋಟಿ, ಅವರಿಗೆ ಕಲಿಸುವ ಶಿಕ್ಷಕರ ಸಂಖ್ಯೆ ೩೬ ಲಕ್ಷಕ್ಕೂ ಮೀರಿದ್ದಾಗಿ ಜಗತ್ತಿನಲ್ಲಿಯೇ ಎರಡನೆಯ ಅಥವಾ ಮೂರನೆಯ ಅತಿ ದೊಡ್ಡಜಾಲವೆನಿಸಿದೆ. ಮೇಲಿನ ಅಂಕಿಅಂಶಗಳೇ ಈ ಜಾಲದ ಅಗಾಧತೆ ಮತ್ತು ಕ್ಲಿಷ್ಟತೆಯನ್ನು ತೋರಿಸುತ್ತದೆ. ಸ್ವಾತಂತ್ರ್ಯಪೂರ್ವದಲ್ಲಿ ಜಿಲ್ಲೆಗೊಂದು ಹೈಸ್ಕೂಲು ಇತ್ತು, ಅದು ಸಹ ಜಿಲ್ಲಾ ಕೇಂದ್ರದಲ್ಲಿ ಮಾತ್ರ ಇತ್ತು. ಅಲ್ಲಿಂದ ಬೆಳೆಯುತ್ತಾಬಂದ ಈ ಕ್ಷೇತ್ರ ಇಷ್ಟು ಅಗಾಧವಾಗಿ ವಿಸ್ತರಿಸಿ ನಿಂತಿರುವುದು ನಿಜಕ್ಕೂ ಹೆಮ್ಮೆಯ ಮತ್ತು ಪ್ರಶಂಸಾರ್ಹ ವಿಷಯ.

ಮಹಾಕಾಯವಾದ ಈ ಯಂತ್ರದೊಳಗೆ ಇಣಕಿನೋಡಿದರೆ ಬಹು ಬಗೆಯಸಮಸ್ಯೆಗಳಿಂದ ಆವೃತವಾಗಿರುವುದು ಕಂಡುಬರುತ್ತದೆ.

ನಮ್ಮ ಶಿಕ್ಷಣಪದ್ಧತಿಯ ಬಹುದೊಡ್ಡ ದ್ವಂದ್ವಗಳೆಂದರೆ ಅದು ಒಂದೆಡೆ ವಿಸ್ತರಣೆ, ಇನ್ನೊಂದೆಡೆ ಸುಧಾರಣೆಗಳ ನಡುವೆ ಇರುವ ತೊಳಲಾಟ. ಶಿಕ್ಷಣ ವ್ಯಾಪಿಸುತ್ತಾ ಹೋದಂತೆಲ್ಲ ಇದ್ದುದನ್ನು ಸುಧಾರಿಸಲಾರದೆ ಹೋಗುತ್ತದೆ. ಇದ್ದುದನ್ನು ಸುಧಾರಿಸತೊಡಗಿದರೆ, ವಿಸ್ತರಣೆಯಕಡೆ ಒತ್ತಾಯ ಹೆಚ್ಚುತ್ತದೆ. ಹೀಗೆ ವಿಸ್ತರಣೆ– ಸುಧಾರಣೆಗಳ ದ್ವಂದ್ವದಲ್ಲಿ ಶಿಕ್ಷಣ ಸಿಲುಕಿದಂತೆ ಕಾಣುತ್ತದೆ. ಶಿಕ್ಷಣ ವಿಸ್ತರಿಸಿತೋ, ನಿರುದ್ಯೋಗ ಹೆಚ್ಚಿತು. ಶಿಕ್ಷಣ ವಿಸ್ತರಿಸಲಿಲ್ಲವೋ ಅಜ್ಞಾನ ಬೆಳೆಯಿತು. ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಮತ್ತೊಂದು ಗಂಭೀರ ದೋಷ ಇದೆ. ಅದು ಶಾಲಾತ್ಯಾಗಿಗಳ ಸಮಸ್ಯೆ.

ಶಿಕ್ಷಣಕ್ಷೇತ್ರದಲ್ಲಿ ಹಣಕಾಸು ವಿನಿಯೋಗದ ನೀತಿಯೂ ವಿಲಕ್ಷಣವಾಗಿದೆ. ಅತಿ ಹೆಚ್ಚು ಹಣ ಕಲಶದ ಮೇಲೆ ಸುರಿಯುತ್ತಿದ್ದಾರೆ. ಇತ್ತ ಬೇರುಗಳೇ ಒಣಗುತ್ತಿವೆ. ಬೇರು ಅಭದ್ರವಾಗುತ್ತಿವೆಯಲ್ಲ ಎನ್ನುವ ಕಡೆ ಸರ್ಕಾರದ ಗಮನವೇ ಇಲ್ಲ. ರಾಜ್ಯಸರ್ಕಾರ ಉಚ್ಚಶಿಕ್ಷಣದ ಮೇಲೆ ಬಲು

ಹೆಚ್ಚು ಖರ್ಚುಮಾಡುತ್ತಿದೆ. ಪ್ರಾಥಮಿಕ ಶಿಕ್ಷಣದ ಮೇಲೆ ತುಂಬ ಕಡಿಮೆ ಖರ್ಚು ಮಾಡುತ್ತಿದೆ ಎನ್ನುವುದು ಗಮನಾರ್ಹ ಅಂಶ.

ಇನ್ನು ಶಿಕ್ಷಕರ ಶಿಕ್ಷಣದ ಸಮಸ್ಯೆ, ವಿದ್ಯಾಭ್ಯಾಸ ಮುಗಿದ ನಂತರ ಮುಂದೇನು ಎನ್ನುವ ಪ್ರಶ್ನೆ, ನೌಕರಿಗಾಗಿ, ಉದ್ಯೋಗ ಅರಸುತ್ತಾ ಅಲೆದಾಡುವ ದಾರುಣ ದೃಶ್ಯ; ಜ್ಞಾನ - ಕರ್ಮ ಎಂದರೆ ಬುದ್ಧಿ-ಶ್ರಮ, ಅರ್ಥಾತ್ ತಲೆ-ಕೈಗಳ ಸೃಜನಾತ್ಮಕ ಪ್ರತಿಭೆಗಳ ಸಪ್ರಮಾಣ ಮತ್ತು ಸಮನ್ವಿತ ವಿಕಾಸದ ಪ್ರಶ್ನೆ, ಪರೀಕ್ಷಾ ಪದ್ಧತಿಯ ತೀವ್ರ ದೋಷಯುಕ್ತ ರೀತಿ- ನೀತಿ, ಪಠ್ಯ ಪುಸ್ತಕಗಳ ಅವರ್ಣನೀಯ ಅವಿಚಾರ ರಚನಾ ವಿಧಾನ, ವಿದ್ಯಾಭ್ಯಾಸದ ನಂತರ ವಿದ್ಯಾರ್ಥಿ ಅಭಿಜಾತ ವರ್ಗ(ಉತ್ತಮ ವರ್ಗ)ಕ್ಕೆ ಸೇರಿದಂಥವನಾಗಿ, ಅದನ್ನೇ ಅನುಸರಿಸುವವನಾಗಿ, ಶ್ರಮ ಜೀವನ ಮತ್ತು ಗ್ರಾಮೀಣ ಜೀವನವನ್ನು ಕಂಡು ಮೂಗು ಮುರಿಯುವವನಾಗುವ ಸಮಸ್ಯೆ, ಪ್ರತಿಭಾಪಲಾಯನದಲ್ಲಿ ಹೆಚ್ಚಳ ಇತ್ಯಾದಿ ದ್ವಂದ್ವ ಮತ್ತು ಸಮಸ್ಯೆಗಳ ಸುಳಿಗಳಲ್ಲಿ ಶಿಕ್ಷಣಕ್ಷೇತ್ರ ಸಿಲುಕಿದೆ. ಪರಿಣಾಮವಾಗಿ ವಿಶಾಲ ಸಮಾಜದ ಕುಪ್ರಭಾವ ಶಿಕ್ಷಣಕ್ಷೇತ್ರದ ಮೇಲಾಗುತ್ತಿದೆಯೇ ವಿನಃ ಶಿಕ್ಷಣಕ್ಷೇತ್ರದ ಸತ್ಪ್ರಭಾವ ಸಮಾಜದ ಮೇಲೆ ಆಗದಿರುವ ಶೋಚನೀಯ ಸ್ಥಿತಿಯ ಚಿತ್ರ ಎದುರಾಗುತ್ತಿದೆ.

ಇವೆಲ್ಲಕ್ಕೂ ಮೂಲಕಾರಣ ಮತ್ತು ಮೂಲದೋಷ ಸಹ ಎಲ್ಲಿದೆ ಎಂದು ಹುಡುಕಾಡಬೇಕಾಗಿಲ್ಲ. ಶಿಕ್ಷಣದ ಗುರಿಯೇನಿರಬೇಕೆಂಬುದನ್ನೇ ದೇಶ ಇನ್ನಾದರೂ ನಿಶ್ಚಯ ಮಾಡಿಕೊಂಡಿಲ್ಲ. ಇದಕ್ಕೂ ಮೂಲಗಾಮಿ ಪ್ರಶ್ನೆ ಇದರ ಜೊತೆಗೆ ತಳುಕು ಹಾಕಿಕೊಂಡಿರುವುದರೊಂದಿಗೆ ಸಮಾಜ ಎಂಥದೋ ಅಂಥ ಪ್ರಜ್ಞೆ, ಅಂಥ ಸಭ್ಯತೆ ಬೇಕು. ಆದುದರಿಂದ ಮೂಲತಃ ನಮಗೆಂತಹ ಸಮಾಜ ಬೇಕು ಎನ್ನುವುದನ್ನು ದೇಶ ಮೊದಲು ಗೊತ್ತುಮಾಡಿಕೊಳ್ಳದಿರುವುದೇ ಗಂಭೀರ ಸಮಸ್ಯೆಯಾಗಿದೆ.

ಪಠ್ಯ ಪುಸ್ತಕಗಳ ಸಮಸ್ಯೆಯನ್ನೇ ತೆಗೆದುಕೊಳ್ಳೋಣ. ಮೇಲಿನ ಮಹತ್ವಪೂರ್ಣ ಮತ್ತು ಮೂಲಗಾಮಿ ವಿಷಯಗಳ ನಿಶ್ಚಯವಾದಾಗಲೇ ಮಕ್ಕಳ ಪಠ್ಯ ಪುಸ್ತಕಗಳು ಎಂತಹವಿರಬೇಕೆಂಬುದೂ ತಾನಾಗಿಯೇ ಸ್ಪಷ್ಟವಾಗುವುದು. ಆಗಲೇ ಅವು ಇಂದಿನ ದುರ್ಗತಿ, ದಿಶಾಹೀನತೆಯಿಂದ ಪಾರಾಗಬಲ್ಲವು. ಇಂದಿನ ಪಠ್ಯ ಪುಸ್ತಕಗಳು ಮಕ್ಕಳ ಚರಿತ್ರೆ ನಿರ್ಮಾಣಕ್ಕೆ ನೆರವಾಗದೇ ಮಾಹಿತಿಯೇ ಜ್ಞಾನವೆಂಬ ದೋಷಪೂರ್ಣ ಅದೂರ ದೃಷ್ಟಿಯ

ಮತ್ತು ತತ್ಕಾಲದ ಗುರಿಯನ್ನವಲಂಬಿಸಿ ತಯಾರಾಗುತ್ತಿವೆ. ಮಕ್ಕಳ ತಲೆಗೆ ಬೇಕಾದ- ಬೇಡವಾದ ಅನಪೇಕ್ಷಿತ ಹೊರೆಯಾಗುವಂಥ ಎಲ್ಲ ತರಹದ ಮಾಹಿತಿ ತುಂಬಿದ ಪಠ್ಯ ಪುಸ್ತಕಗಳು ಪ್ರಚಲನೆಯಲ್ಲಿವೆ. ಈ ಸ್ಥಿತಿ ಬದಲಾಗಬೇಡವೇ?

ಐದರಿಂದ ಹದಿನಾಲ್ಕು ವರ್ಷಗಳೊಳಗಿನ ಮಕ್ಕಳಿಗೆ ಉಚಿತ, ಕಡ್ಡಾಯ ಪ್ರಾಥಮಿಕ ಶಿಕ್ಷಣದ ವ್ಯವಸ್ಥೆ ಮಾಡುವ, ಸಾಧಿಸುವ ಗುರಿಯನ್ನು ರಾಷ್ಟ್ರಪಿತಾಮಹ ದಾದಾಭಾಯಿ ನವರೋಜಿ ಮತ್ತು ಇತರ ಅಗ್ರಣಿನಾಯಕರು ದೇಶದ ಮುಂದೆ ಇರಿಸಿದ್ದರು. ಅದಕ್ಕೊಂದು ಕಾಲಮಿತಿಯನ್ನು ಗೊತ್ತುಮಾಡಲಾಗಿತ್ತು. ಆ ಅವಧಿಯನ್ನೇ ಎರಡು ಬಾರಿ ಮುಂದೂಡಬೇಕಾಗಿಬಂದುದು ರಾಷ್ಟ್ರದ ಇಚ್ಛಾಶಕ್ತಿ ಹೀನತೆಯ ದ್ಯೋತಕ. ಇಂದಿಗೂ ಈ ಗುರಿಯನ್ನು ತಲುಪಲಾಗಿಲ್ಲ.

ಮೇಲೆ ಚರ್ಚಿಸಿದ ಎಲ್ಲ ಅಂಶಗಳನ್ನೂ ಗಮನಿಸಿಯೇ ಗಾಂಧೀಜಿ ಬುನಿಯಾದಿ ಶಿಕ್ಷಣಪದ್ಧತಿಯನ್ನು ವಿಕಸಿಸಿ ದೇಶದ ಮುಂದಿಟ್ಟರು. ವಿನೋಬಾ ಅದನ್ನೇ ಒತ್ತಿ ಹೇಳಿದರು. ಚೀನಾದ 'ಹಾಫ್ಸ್- ಹಾಫ್ ಸ್ಕೂಲ್ಸ್' ದ ಉದಾಹರಣೆಯನ್ನೂ ಶಿಫಾರಸು ಮಾಡಿದರು. ಜೆ.ಪಿ. ಶಿಕ್ಷಣದಲ್ಲಿ ಅಮೂಲಾಗ್ರ ಪರಿವರ್ತನೆಯ ಉದ್ದೇಶವನ್ನೂ ತಮ್ಮ ಆಂದೋಳನದ ಮುಖ್ಯ ಅಂಶಗಳಲ್ಲೊಂದನ್ನಾಗಿ ಮಾಡಿದ್ದರು. ಆದರೆ ದೇಶ ಈ ಮೂವರ ವಿಚಾರವನ್ನೂ ಉಪೇಕ್ಷಿಸಿತು. ಅವರ ಪ್ರಯೋಗಗಳನ್ನು ಉದ್ದೇಶಪೂರ್ವಕ ಅಸಫಲಗೊಳಿಸಲಾಯಿತು. ಅಸಫಲಗೊಳಿಸುವವರ ಪಂಕ್ತಿಯಲ್ಲಿ ಮುಂಚೂಣಿಯಲ್ಲಿ ನಿಂತಿದ್ದವರು ಶಿಕ್ಷಕರೇ. ಶಿಕ್ಷಣದಲ್ಲಿ ಪರಿವರ್ತನೆಯನ್ನೇ ಬಯಸದ ಎಲ್ಲ ಪರಿವರ್ತನೆಗಳಿಗೂ ವಿರೋಧ ಮತ್ತು ಅಡ್ಡಿಯೊಡ್ಡುವ ವರ್ಗ ಯಾವುದಾರೂ ಇದ್ದರೆ ಅದು ಶಿಕ್ಷಕವರ್ಗವೇ ಎಂದು ಜೆ.ಪಿ. ವ್ಯಥಿತರಾಗಿ ಉದ್ಗರಿಸುವಂತಾಯಿತು. ಶಿಕ್ಷಕರು ತಮಗಂಟಿದ ಈ ಕಳಂಕವನ್ನು ಹೋಗಲಾಡಿಸಲು ಶಿಕ್ಷಕರು ಮುಂದಾದ ದಿನ ಶಿಕ್ಷಣದಲ್ಲಿ ಅಮೂಲಾಗ್ರ ಪರಿವರ್ತನೆಯ ಹಾದಿ ಸುಗಮವಾದಂತೆಯೇ.

* * *

ಜನಪದ ನಿಲಯದ ಅಂತರಂಗದಲ್ಲಿ.....೨೨



'ಬಿಡುಗಡೆ, ಬಿಡುಗಡೆ, ಬಿಡುಗಡೆ'
ಎಂದು ಯುಗಯುಗದ ಕೂಗು;
'ತೊಡಕು, ತೊಡಕು, ತೊಡಕು'
ಎಂದು ಅದಕ್ಕೆ ಅಡಿಗಡಿಗೆ ಉತ್ತರ
'ತೊಡಕು ಇದ್ದರೆ ಬಿಡುಗಡೆ ಹೇಗೆ?
ತೊಡಕು ಇರದಿದ್ದರೆ ಬಿಡುಗಡೆ ಏನು?'
ಇದೇ ತೊಡಕಿನ ತೊಡಕು!
ಇದನ್ನು ಬಿಡಿಸುವವರೆಗೆ ಬಿಡುಗಡೆಗೆ ಬಿಡುಗಡೆಯಿಲ್ಲ.

–ಅಂಬಿಕಾತನಯದತ್ತ

೧೯೫೯ ರಲ್ಲಿ ಪ್ರಾರಂಭವಾದ ಶ್ರೀಕೃಷ್ಣ ಶಿಶುವಿಹಾರವು ಕಾಲಕ್ರಮೇಣ ಟ್ರಸ್ಟಿನ ಆಶ್ರಯದಲ್ಲಿ ಹತ್ತಾರು ಸಾರ್ವಜನಿಕ ಚಟುವಟಿಕೆಗಳಿಗೆ ಕಾರಣವಾಗುತ್ತ ಹೋಯಿತು. ಅಂತೆಯೇ ನನ್ನ ಜೀವನದ ವಿಕಾಸವಾಗುತ್ತಲೂ ಹೋಯಿತು.

ಪೇಟೆ ಶ್ರೀಕೃಷ್ಣ ದೇವಸ್ಥಾನವೆಂಬ ಹೆಸರಿದ್ದ ಹಳೆಯ ಕಟ್ಟಡದಲ್ಲಿದ್ದ ಶಿಶುವಿಹಾರವನ್ನು ಮುಂದೆ ಒಂದು ವರ್ಷದ ಹೊತ್ತಿಗೆ ಕಲ್ಯಾಣಿ ಬೀದಿಯ ಮೂಲೆಯಲ್ಲಿದ್ದ ಶ್ರೀಪರಕಾಲಮಠದ ಕಟ್ಟಡಕ್ಕೆ ಸ್ಥಳಾಂತರಿಸಲು ಸಾಧ್ಯವಾಯಿತು. ಈ ನಿಮಿತ್ತವಾಗಿ ಪರಕಾಲಮಠದೊಂದಿಗೆ ಉಂಟಾದ ಟ್ರಸ್ಟಿನ ಸಂಬಂಧವು ಬಲಿಷ್ಠಗೊಳ್ಳುತ್ತ ಬಂದಿತು. ಈ ಸಂಬಂಧವು ಮುಂದುವರಿಯುತ್ತಾ ಹೋಯಿತು. ಈ ಸ್ಥಳಾಂತರವು ಸ್ವಾರಸ್ಯಕರವಾಗಿ ನಡೆಯಿತು. ಈ ಕಟ್ಟಡದ ಮುಂಭಾಗ ಮತ್ತು ಉತ್ತರ ದಿಕ್ಕಿನಲ್ಲಿ ಜಗಲಿ; ಮೇಲ್ಛಾವಣಿಗೆ ಆಧಾರವಾಗಿ ಸಾಲು ಕಂಬಗಳು; ಬಹಳ ಎತ್ತರವಾದ ಗೋಡೆಗಳು; ಬಹು ಇಳಿಜಾರಾಗಿ ಜೋಡಿಸಲಾದ ಮಂಗಳೂರು ಹೆಂಚಿನ ಹೊದಿಕೆ. ಭೂಮಟ್ಟದಿಂದ ಎರಡು ಮೂರು ಅಡಿ ಎತ್ತರವಾಗಿರುವಂಥ ಈ ಮನೆ ತನ್ನದೇ ಆದ ಸುಂದರ ಲಕ್ಷಣವನ್ನು ಹೊಂದಿತ್ತು. ಮನೆಯ ಹಿಂಭಾಗ ಹಿತ್ತಲು ಪ್ರದೇಶ. ಮನೆಯೊಳಗೆ ಎರಡು ದೊಡ್ಡ ಕೊಠಡಿಗಳು ಮತ್ತು ನಾಲ್ಕು ಚಿಕ್ಕ ಕೊಠಡಿಗಳು. ನೆಲಕ್ಕೆ ಸಿಮೆಂಟ್ ಹಾಕಲಾಗಿತ್ತು. ಈ ಕಟ್ಟಡ ಇದ್ದ ಕಲ್ಯಾಣಿ ಬೀದಿಯಲ್ಲಿಯೇ ಭಕ್ತ ಮಂಡಳಿಯಲ್ಲಿ ನಾನು ವಾಸವಾಗಿದ್ದೆ. ಶಿಶುವಿಹಾರಕ್ಕೆ ಒಳ್ಳೆಯ ಸ್ಥಳವನ್ನು ಹುಡುಕುತ್ತಿದ್ದ ನನಗೆ ಈ ಕಟ್ಟಡ ದೃಷ್ಟಿಗೆ ಬಿತ್ತು. ಈ ಕಟ್ಟಡ ನನ್ನನ್ನು ಆಕರ್ಷಿಸಲು ಇನ್ನೊಂದು ಕಾರಣವೇನೆಂದರೆ ಈ ಕಟ್ಟಡದ ಮುಖ್ಯ

ಬಾಗಿಲು ಮತ್ತು ಕಿಟಕಿಗಳು ಸದಾ ತೆರೆದುಕೊಂಡೇ ಇರುತ್ತಿದ್ದವು. ಬೀಗ ಹಾಕಿದ್ದನ್ನೇ ನಾನು ನೋಡಿರಲಿಲ್ಲ. ಒಂದು ದಿನ ಕುತೂಹಲದಿಂದ ಈಕಟ್ಟಡದೊಳಗೆ ಪ್ರವೇಶಿಸಿದೆ. ಮನೆಯಲ್ಲಾ ಖಾಲಿಯಿತ್ತು. ಶಿಶುವಿಹಾರವನ್ನು ನಡೆಸಲು ಸೂಕ್ತ ಕಟ್ಟಡವಿದೆಂದು ಅಂದು ಕೊಂಡೆ. ಕಟ್ಟಡವನ್ನು ಸ್ವಚ್ಛಗೊಳಿಸಿದೆ. ಮಾರನೆಯ ದಿನ ಶಿಶುವಿಹಾರದ ಮಕ್ಕಳೊಂದಿಗೆ ಈ ಕಟ್ಟಡದಲ್ಲಿ ಪ್ರವೇಶಿಸಿದೆ. ಆನಂತರ ಈಕಟ್ಟಡದ ವಾರಸುದಾರರು ಯಾರು, ಈ ಕಟ್ಟಡದಲ್ಲಿ ಮೊದಲು ಯಾರು ವಾಸವಾಗಿದ್ದರು ಇತ್ಯಾದಿ ಸಂಗತಿಗಳನ್ನು ಕಲೆ ಹಾಕಲು ಪ್ರಯತ್ನಿಸಿದೆ. ಆಗ ತಿಳಿದ ವಿಷಯವೆಂದರೆ ಈ ಕಟ್ಟಡದಲ್ಲಿ ಪೋಲಿಸ್ ಇಲಾಖೆಯ ಅಂದಿನ ದಫೇದಾರರು ಈ ಕಟ್ಟಡವನ್ನು ತಮ್ಮ ನಿವಾಸವನ್ನಾಗಿ ಮಾಡಿಕೊಂಡಿದ್ದರು; ಅದಕ್ಕೂ ಮೊದಲು ಅವರ ಹಿಂದೆ ಇದ್ದ ದಫೇದಾರರು ವಾಸವಾಗಿದ್ದರು. ಹೀಗೆ ಒಂದು ರೀತಿಯಲ್ಲಿ ಈ ಕಟ್ಟಡ ಪೋಲಿಸ್ ಇಲಾಖೆಯ ದಫೇದಾರರ ಅನಧಿಕೃತ ಕ್ವಾರ್ಟರ್ಸ್ ಆಗಿದ್ದಿತು. ಯಾವ ದಫೇದಾರರೂ ಬಾಡಿಗೆ ಕೊಡುತ್ತಿರಲಿಲ್ಲ. ಎಷ್ಟು ಕಾಲ ಬೇಕೋ ಅಷ್ಟು ಕಾಲ ಇದ್ದು ವರ್ಗವಾದೊಡನೆ ಬೇರೊಬ್ಬ ದಫೇದಾರನಿಗೆ ಅವಕಾಶ ಮಾಡಿಕೊಟ್ಟು ಈ ಮನೆಯನ್ನು ಖಾಲಿ ಮಾಡುತ್ತಿದ್ದರು. ಹೀಗೆ ಯಾರಿಂದಲೂ ವಿಶೇಷ ಗಮನಕ್ಕೆ ಒಳಗಾಗದೇ ಇದ್ದ ಈ ಮನೆಯಲ್ಲಿ ಶಿಶುವಿಹಾರವನ್ನು ಪ್ರಾರಂಭಿಸಿದಾಗ ಅನಧಿಕೃತವಾಗಿ ನಡೆಸುವುದು ತರವಲ್ಲವೆಂದು ಭಾವಿಸಿದೆ. ಅದಕ್ಕಾಗಿ ಈ ಕಟ್ಟಡಕ್ಕೆ ಸಂಬಂಧಿಸಿರುವವರ ಬಗ್ಗೆ ವಿಚಾರಿಸಿದೆ. ಈ ಕಟ್ಟಡವು ಮೈಸೂರು ಶ್ರೀ ಪರಕಾಲ ಮಠಕ್ಕೆ ಸೇರಿದ್ದೆಂದೂ, ಈ ಮಠದ ಪ್ರತಿನಿಧಿಯಾಗಿ ಮೇಲುಕೋಟೆಯಲ್ಲಿ ಕೃಷ್ಣಾಂಜಿನಪಟ್ಟೆ ನಾರಾಯಣ ಅಯ್ಯಂಗಾರರೆಂದೂ ತಿಳಿಯಿತು. ಅವರೊಂದಿಗೆ ಮಾತನಾಡಲು ಅವರ ಮನೆಗೆ ಹೋದೆ. ಅವರ ಮನೆ ಶ್ರೀ ನಾರಾಯಣಸ್ವಾಮಿ ದೇಸ್ಥಾನದ ಎದುರು ಒಂದು ಓಣಿಯಲ್ಲಿದ್ದಿತು. ಶ್ರೀ ನಾರಾಯಣ ಅಯ್ಯಂಗಾರರು ದೇವಸ್ಥಾನದಲ್ಲಿ ಮೊದಲ ಗೌರವವನ್ನು ಪಡೆಯುತ್ತಿದ್ದರು. ಅವರಿಗೆ ಮಧ್ಯವಯಸ್ಸು ಮೀರಿತ್ತು. ಸಾತ್ವಿಕರು. ಅವರನ್ನು ಕಂಡು ಕಲ್ಯಾಣಿ ಬೀದಿಯಲ್ಲಿರುವ ಮಠದ ಕಟ್ಟಡದಲ್ಲಿ ಶಿಶುವಿಹಾರವನ್ನು ನಡೆಸಲು ಅನುಮತಿ ಕೊಡಬೇಕೆಂದು ವಿನಂತಿಸಿಕೊಂಡೆ. ಮೇಲುಕೋಟೆಯಲ್ಲಿ ಪುಟ್ಟ ಮಕ್ಕಳಿಗಾಗಿ ಶಿಶುವಿಹಾರದಂಥ ಚಟುವಟಿಕೆಯಿಲ್ಲದೇ ಇರುವುದು ಒಂದು ಕೊರತೆಯೆಂದು ಅವರಿಗೆ ಮನವರಿಕೆ ಮಾಡಿಕೊಟ್ಟೆ. ಅವರು ಒಪ್ಪಿಕೊಂಡರು. ತಿಂಗಳೊಂದಕ್ಕೆ ಕೇವಲ ಹತ್ತು ರೂಪಾಯಿಗಳಿಗೆ ಆ ಕಟ್ಟಡವನ್ನು ಬಾಡಿಗೆಗೆ ಕೊಡಲು ಒಪ್ಪಿದರು ಮತ್ತು ಈ ವಿಷಯವನ್ನು ಮೈಸೂರಿನಲ್ಲಿರುವ ಶ್ರೀ ಪರಕಾಲಮಠಕ್ಕೆ ತಿಳಿಸಿದರು. ಆಗ ಶ್ರೀ ವಾಗೀಶಸ್ವಾಮಿಯವರು ಪರಕಾಲ ಮಠದ ಪೀಠವನ್ನು ಅಲಂಕರಿಸಿದ್ದರು. ಅವರು ಸಹ ಒಪ್ಪಿಗೆ ಕೊಟ್ಟರು. ನನಗೆ ತುಂಬಾ

ಸಂತೋಷವಾಯಿತು. ನಂತರ ಶಿಶುವಿಹಾರವನ್ನು ಶ್ರೀಕೃಷ್ಣ ದೇವಸ್ಥಾನದಿಂದ ಕಲ್ಯಾಣಿ ಬೀದಿಯಲ್ಲಿರುವ ಶ್ರೀ ಪರಕಾಲಮಠದ ಕಟ್ಟಡಕ್ಕೆ ಖಾಯಂ ಆಗಿ ಸ್ಥಳಾಂತರಿಸಿದೆ. ಈ ಕಟ್ಟಡದ ಮುಂದೆ ಶ್ರೀಕೃಷ್ಣ ಶಿಶುವಿಹಾರವೆಂಬ ನಾಮಫಲಕವನ್ನು ಹಾಕಿದೆ. ಪ್ರವೇಶಬಾಗಿಲು ಎದುರು ಶ್ರೀಕೃಷ್ಣನು ಹಸುವನ್ನು ಒರಗಿಕೊಂಡು ಕೊಳಲು ಊದುತ್ತಿರುವ ಮಣ್ಣಿನ ವಿಗ್ರಹವನ್ನು ಹಾಕಿದೆ. ಶಿಶುವಿಹಾರದ ಮಕ್ಕಳು ಈ ಹೊಸ ಸ್ಥಳವನ್ನು ತುಂಬಾ ಇಷ್ಟಪಟ್ಟರು. ಮನೆಯ ಹಿಂದೆ ಚೌಕಾಕಾರದ ಹಿತ್ತಲು ಸಹ ಇತ್ತು. ಈ ಹಿತ್ತಲಲ್ಲಿ ಒಂದು ಕಡೆ ಒಂದು ತೊಟ್ಟಿಯನ್ನು ಕಟ್ಟಿ ಅದರಲ್ಲಿ ಮರಳು ಹಾಕಿಸಿದೆ. ಈ ಮರಳ ತೊಟ್ಟಿಯಲ್ಲಿ ಮಕ್ಕಳು ಕುಳಿತು ಕೊಂಡು ಬಹಳಷ್ಟು ಆಟವಾಡುತ್ತಿದ್ದರು.

ಇಷ್ಟರೊಳಗೆ ನಾನು ಗಿರಿಜಾಳನ್ನು ಮದುವೆಯಾಗಬೇಕೆಂಬ ಇಚ್ಛೆ ಮನದಲ್ಲಿ ಮೂಡಿತು. ಶಿಶುವಿಹಾರದ ಕಾರ್ಯನಿಮಿತ್ತ ಆಗಾಗ್ಗೆ ಮೇಲುಕೋಟೆಗೆ ಬರುತ್ತಿದ್ದ ಗಿರಿಜಾಳೊಂದಿಗೆ ಮೇಲುಕೋಟೆಯ ಸುಪ್ರಸಿದ್ಧ ಪ್ರೇಕ್ಷಣೀಯ ಸ್ಥಳವಾದ ಧನುಷ್ಕೋಟಿಯ ಪ್ರದೇಶದಲ್ಲಿ ಓಡಾಡಿಕೊಂಡು ಬರುತ್ತಿದ್ದೆ. ಈ ಮೊದಲು ನಾನೊಬ್ಬನೆ ಅನೇಕ ಸಲ ಈ ಸ್ಥಳಕ್ಕೆ ಭೇಟಿ ಕೊಟ್ಟಿದ್ದೆ ಮತ್ತು ಸೂರ್ಯಾಸ್ತವನ್ನು ಅಲ್ಲಿಯ ಆಯಕಟ್ಟಿನ ಒಂದು ಬಂಡೆಯ ಮೇಲೆ ಕುಳಿತು ನೋಡುತ್ತಿದ್ದೆ. ಆ ಸೂರ್ಯಾಸ್ತವು ಮನಸ್ಸಿಗೆ ನೆಮ್ಮದಿಯನ್ನು ತಂದು ಕೊಡುತ್ತಿತ್ತು ಜೊತೆಗೆ ಮೇಲುಕೋಟೆಯ ಬಗ್ಗೆ ಪ್ರೀತಿಯನ್ನು ಹುಟ್ಟಿಸುತ್ತಿತ್ತು. ಆ ಬಂಡೆಯ ಮೇಲಿಂದ ಮಣ್ಣಿನ ರಸ್ತೆಯನ್ನೊಂದನ್ನು ನೋಡುತ್ತಿದ್ದೆ. ಅದು ಮೇಲುಕೋಟೆ- ಚಿನಕುರಳಿ ದಾರಿಯಾಗಿತ್ತು. ಆ ರಸ್ತೆಯಲ್ಲಿ ಯಾವ ಸಂಚಾರವೂ ಇರುತ್ತಿರಲಿಲ್ಲ. ಮುಂದೊಂದು ದಿನ ಈ ರಸ್ತೆಯ ಪಕ್ಕದಲ್ಲಿಯೆ ಹೊಸ ಜೀವನ ದಾರಿ ಎಂಬ ಕೇಂದ್ರವನ್ನು ಪ್ರಾರಂಭಿಸುತ್ತೇನೆಂಬ ಯಾವ ಕಲ್ಪನೆಯೂ ಇರಲಿಲ್ಲ.

ನನ್ನ ಮದುವೆಯ ವಿಚಾರವನ್ನು ಪ್ರಸ್ತಾಪಿಸುವುದಕ್ಕಾಗಿ ಮತ್ತು ನಾನು ಇಷ್ಟಪಟ್ಟಿರುವ ಹುಡುಗಿಯ ವಿಚಾರವನ್ನು ತಿಳಿಸುವುದಕ್ಕಾಗಿ ಆಗ ನನ್ನ ತಂದೆ ಹೆಡ್ ಪೋಸ್ಟ್ ಮಾಸ್ಟರರಾಗಿ ಕೆಲಸ ಮಾಡುತ್ತಿದ್ದ ಮಹಾರಾಷ್ಟ್ರದಲ್ಲಿಯ ಸಾಂಗಲಿಗೆ ಪ್ರಯಾಣ ಬೆಳೆಸಿದೆ.

ಮುಂದುವರಿಯುವುದು.............

ಜನಪದ ಸೇವಾ ಟ್ರಸ್ಟ್‌ನ ಅಂಗಳ

ಜನಪದ ಸೇವಾ ಟ್ರಸ್ಟ್‌ಗೂ ಮತ್ತು ಲೋಕನಾಯಕ ಜಯಪ್ರಕಾಶ್ ನಾರಾಯಣರಿಗೂ ಮಧ್ಯ ನಿಕಟವಾದ ಸಂಬಂಧವಿದೆ. ಈ ನಿಕಟತೆ ಭಾವನಾತ್ಮಕವಾಗಿಯೂ ಇದೆ, ವೈಚಾರಿಕವಾಗಿಯೂ ಇದೆ. ಈ ನಿಕಟತೆಗೆ ಪ್ರಮುಖ ಕಾರಣಗಳೆಂದರೆ ಟ್ರಸ್ಟಿನ ಸಂಸ್ಥಾಪಕನಾಗಿ, ಕಾರ್ಯಕರ್ತನಾಗಿ, ಕಾರ್ಯದರ್ಶಿಯಾಗಿ ಕಳೆದ ೪೫ ವರ್ಷಗಳಿಂದ ಮೇಲುಕೋಟೆ ಮತ್ತು ಸುತ್ತಲಿನ ಗ್ರಾಮಗಳಲ್ಲಿ ಸಾರ್ವಜನಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿರುವ ಸುರೇಂದ್ರ ಕೌಲಗಿಯವರು ಜಯಪ್ರಕಾಶ್ ನಾರಾಯಣರಿಗೆ ೧೯೫೪ ರಿಂದ ೧೯೫೯ ರವರೆಗೆ ೫ ವರ್ಷಗಳ ಕಾಲ ಆಪ್ತಸಹಾಯಕರಾಗಿ ಕೆಲಸ ಮಾಡಿದ್ದರಿಂದ ಈ ನಿಕಟತೆ ಉಂಟಾಗಿದೆ. ಅಲ್ಲದೆ ಸ್ವತಃ ಜಯಪ್ರಕಾಶ್ ನಾರಾಯಣರು ೧೯೬೪ ರಲ್ಲಿ ಮೇಲುಕೋಟೆಗೆ ಬಂದು ಒಂದು ರಾತ್ರಿ ಟ್ರಸ್ಟಿನಲ್ಲಿ ತಂಗಿದ್ದು ಎರಡನೆಯ ಕಾರಣವಾಗಿದೆ. ಜನಪದ ಸೇವಾ ಟ್ರಸ್ಟ್‌ನ ಧ್ಯೆಯೋದ್ದೇಶಗಳಲ್ಲಿ ಪ್ರಮುಖವಾದ ಉದ್ದೇಶ ಸರ್ವೋದಯ ಸಮಾಜದ ರಚನೆ. ಜಯಪ್ರಕಾಶರು ಗಾಂಧೀಜಿ ಮತ್ತು ವಿನೋಬಾರವರ



ವಿಚಾರಗಳನ್ನು ಒಪ್ಪಿಕೊಂಡು ಸರ್ವೋದಯ ವಿಚಾರಕ್ಕಾಗಿ ಕೆಲಸಮಾಡಿದಂಥವರು. ಇದು ವೈಚಾರಿಕ ಕಾರಣ.

ಈ ಸೈದ್ಧಾಂತಿಕ ಸಂಬಂಧದ ಮುನ್ನಡೆಯಾಗಿ ಜನಪದ ಸೇವಾ ಟ್ರಸ್ಟ್ ೨೦೦೫ ಜನವರಿಯಿಂದ ಜೆ.ಪಿ. ಯವರು ಪ್ರತಿಪಾದಿಸಿದ್ದ ಸಂಪೂರ್ಣ ಕ್ರಾಂತಿಯ ಹೆಸರಿನಲ್ಲಿ ವಿದ್ಯಾಲಯವೊಂದನ್ನು ನಡೆಸಿಕೊಂಡು ಬರುತ್ತಿದೆ. ಪ್ರತಿ ತಿಂಗಳು ೨೦ ಜನ ಯುವಕ/ತಿಯರಿಗಾಗಿ ಮೂರು ದಿನಗಳ ಶಿಬಿರವನ್ನು ಏರ್ಪಡಿಸಿಕೊಂಡು ಬರಲಾಗುತ್ತಿದೆ. ಅದರಂತೆ ಇದುವರೆಗೆ ಐದು ಶಿಬಿರಗಳನ್ನು ಪೂರೈಸಲಾಗಿದೆ.

ಗ್ರಾಮೀಣ ಪ್ರದೇಶದಲ್ಲಿರುವ ಜನರಿಗೆ ಸುಲಭವಾದ, ಆದರೆ, ಪರಿಣಾಮಕಾರಿಯಾದ ಹೋಮಿಯೋಪತಿ ಚಿಕಿತ್ಸೆಯು ದೊರೆಯುವಂತೆ ಮಾಡಲು ಒಂದು ಹೋಮಿಯೋಪತಿ ಚಿಕಿತ್ಸಾ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ಪ್ರತಿ ೧೫ ದಿನಗಳಿಗೊಮ್ಮೆ ಮೈಸೂರಿನಿಂದ ಹೋಮಿಯೋಪತಿ ತಜ್ಞರಾದ ಡಾ॥ ಮನೋಹರ್‌ರವರು ಮೇಲುಕೋಟೆಗೆ ಬಂದು ಆಸಕ್ತ ರೋಗಿಗಳನ್ನು ಪರಿಶೀಲಿಸಿ ಮಾರ್ಗದರ್ಶನ ನೀಡುತ್ತಾರೆ. ಈ ಕೇಂದ್ರವು ಆಗಸ್ಟ್ ೪ ರಿಂದ ಪ್ರಾರಂಭವಾಗಿದೆ. ಪ್ರಾರಂಭದ ದಿನದಂದು ೨೯ ರೋಗಿಗಸಳು ಚಿಕಿತ್ಸೆಯನ್ನು ಪಡೆದರು.

ಅರಣ್ಯದ ಅಂಚಿನಲ್ಲಿರುವ ಕೆಲ ಗ್ರಾಮಗಳಲ್ಲಿ "ಅರಣ್ಯ ರಕ್ಷಣಾ ಸಮಿತಿ"ಗಳನ್ನು ರಚಿಸಲು ಟ್ರಸ್ಟ್ ನೆರವಾಗಿದೆ. ಇತ್ತೀಚೆಗೆ ಕೆಲ ಅರಣ್ಯ ರಕ್ಷಣಾ ಸಮಿತಿಗಳ ಸಭೆಗಳನ್ನು ನಡೆಸಲಾಯಿತು.

ಟ್ರಸ್ಟಿನ ಆಶ್ರಯದಲ್ಲಿ ಖಾದಿ ಉತ್ಪಾದನೆ ಮತ್ತು ಖಾದಿ ಸಿದ್ಧ ಉಡುಪುಗಳ ತಯಾರಿಕಾ ಘಟಕ ಹೊಸ ಜೀವನ ದಾರಿ ಕೇಂದ್ರದಲ್ಲಿ ನಡೆದುಕೊಂಡು ಬರುತ್ತಿವೆ.

* * *

ಸಿನ್ಹಾನ್ಯರಿಂದ

'ಜನಪದ ವಿಚಾರ' ಜುಲೈತಿಂಗಳ ವೈಚಾರಿಕ ಡೈಜೆಸ್ಟ್ ಕೈಸೇರಿ ತುಂಬಾ ಸಂತೋಷವಾಯಿತು. ಅದರಲ್ಲಿರುವ ಎಲ್ಲಾ ವೈಚಾರಿಕ ಲೇಖನಗಳನ್ನು ಓದಿದೆ. ತುಂಬಾ ಅನುಭವ ಪೂರಿತವಾದ ಲೇಖನಗಳನ್ನು ಒದಗಿಸಿದ್ದಕ್ಕೆ ಸಂಪಾದಕರಿಗೆ ಧನ್ಯವಾದಗಳು. ಈ ಲೇಖನಗಳಲೆಲ್ಲಾ ನನ್ನ ಗಮನ ಸೆಳೆದ ಲೇಖನ ಶ್ಯಾನುಭೋಗ್ ಶಂಕರಪ್ಪನವರು ಬರೆದಿರುವ "ಆದರ್ಶ ಪ್ರಾಂಶುಪಾಲ" ಪಿ.ಎಸ್. ಕಾರಂತರ ವ್ಯಕ್ತಿಚಿತ್ರ. ಇದು ನನ್ನನ್ನು ಆಕರ್ಷಿಸಿದ್ದಕ್ಕೆ ಕಾರಣ ನಾನೂ ಕೆಲ ಸಮಯ ಪ್ರಾಂಶುಪಾಲನಾಗಿದ್ದೆ. ಇದನ್ನು ಓದಿದ ತಕ್ಷಣ ಕೆಲವು ಸಿಹಿ ಕಹಿ ನೆನಪುಗಳು ಗರಿಬಿಚ್ಚಿದವು.

–ಎಚ್.ಎಸ್. ಕೇಶವಮೂರ್ತಿ
ಮೈಸೂರು

ಉಪಾಧ್ಯಾಯನಿಗೆ ಇರಬೇಕಾದ ಸ್ವರೂಪ ಯೋಗ್ಯತೆ

–ಡಿ.ವಿ.ಜಿ.

ಪ್ರಸನ್ನತೆ– ಎಂದರೆ ವಿಶ್ವಾಸ ಹುಟ್ಟಿಸುವ ಮುಖಭಾವ, ಉಪಾಧ್ಯಾಯನು ಸ್ನೇಹದ ನಡೆನುಡಿಗಳುಳ್ಳವನಾಗಿರಬೇಕು. ಅವನನ್ನು ನೋಡಿದರೆ ಹುಡುಗರು ಬೆದರದೆ ಅವನೊಡನೆ ಮಾತಾಡಬೇಕೆಂದೆನಿಸಬೇಕು. ಅವನು ಉಗ್ರನಾಗಿರಬಾರದು, ವಕ್ರನಾಗಿರಬಾರದು, ಕುರುಡನೊ ಕಿವುಡನೊ ವಿಕಾರಿಯೊ ಹಾಸ್ಯಪಾತ್ರನೊ ಆಗಿರಬಾರದು.

ಗಾಂಭೀರ್ಯ– ಎಂದರೆ ಗೌರವ ಹುಟ್ಟಿಸುವ ಮಾತು, ನಡತೆ. ಹೇಗೆ ಉಪಾಧ್ಯಾಯನು ಭಯೋತ್ಪಾದಕನಾಗಬಾರದೋ ಹಾಗೆಯೇ ಅವನು ಹುಡುಗಾಟದವನೂ ಆಗಬಾರದು. ಅತಿ ಸಲಿಗೆಯಿಂದ ಅವನ ಮಾತಿಗೆ ಬೆಲೆ ತಗ್ಗುತ್ತದೆ. ಅವನಲ್ಲಿ ಯಾವುದೋ ಒಂದು ಮಹತ್ವದ ಸಂಗತಿ ಇರುವುದೆಂಬ ಭಾವನೆಯನ್ನೋ ಅದನ್ನು ಕೇಳಿ ತಿಳಿದುಕೊಳ್ಳಬೇಕೆಂಬ ಕುತೂಹಲವನ್ನೊ ಅವನು ಶಿಷ್ಯರ ಮನಸ್ಸಿನಲ್ಲಿ ಸರ್ವದಾ ಉಂಟುಮಾಡುತ್ತಿರಬೇಕು.

ವಾಕ್ಯಶುದ್ಧಿ– ಎಂದರೆ ಮಾತಿನ ಸರಿಯಾದ ನುಡಿತ. ಉಪಾಧ್ಯಾಯನಿಗಿರುವ ಮುಖ್ಯಸಾಧನ ವಾಕ್ಕು. ಅವನ ಕಂಠಧ್ವನಿ ಕಿವಿಗೆ ಹಿತವಾಗಿ, ಅವನ ಅಕ್ಷರದ ಉಚ್ಚಾರಣೆ ಸ್ಫುಟವಾಗಿರಬೇಕು; ಅವನ ಪದ್ಯ ಹಾಡುಗಳು ಶ್ರಾವ್ಯವಾಗಿರಬೇಕು; ಅವನ ಮಾತುಕಥೆಯ ರೀತಿ ಕಳೆಕಳೆಯಾಗಿರಬೇಕು.

ಸ್ವಸ್ಥಾನಪರಿಜ್ಞಾನ– ಎಂದರೆ ಸಮಾಜದಲ್ಲಿ ತನಗೆ ದೊರೆತಿರುವ ಸ್ಥಳವೆಂಥಾದ್ದು, ತನಗಿರುವ ಗುಣಶಕ್ತಿಗಳೆಂಥವು, ಆ ಶಕ್ತಿಗಳನ್ನು ಆ ಸ್ಥಾನದ ಕರ್ತವ್ಯಗಳಿಗೆ ಹೇಗೆ ವಿನಿಯೋಗಿಸಿದರೆ ತನ್ನ ಬದುಕು ಸಾರ್ಥಕವಾದೀತು– ಎಂಬೀ ಸ್ವಧರ್ಮವಿವೇಕ: ಇದು ಎಲ್ಲಕ್ಕಿಂತ ಕಷ್ಟವೂ ಎಲ್ಲಕ್ಕಿಂತ ಮುಖ್ಯವೂ ಆದ ಲಕ್ಷಣ. ಇದು ಸ್ವಲ್ಪಮಟ್ಟಿಗಾದರೂ ಉಪಾಧ್ಯಾಯನಲ್ಲಿಲ್ಲದೆ ಹೋದರೆ ಅತನು ಕರ್ತವ್ಯಾಚರಣೆಯಲ್ಲಿ ಕೂಲಿಯಾಳಿನ ಮಟ್ಟಕ್ಕಿಂತ ಮೇಲಕ್ಕೇಳುವುದು ಅಸಾಧ್ಯ.

ವಾಚಕ ಮಿತ್ರರಲ್ಲಿ ವಿನಂತಿ.

ಜನಪದ ವಿಚಾರ ಪ್ರಸ್ತುತ ವಿಷಯಗಳಿಗೆ ಸಂಬಂಧಿ ಸಿದಂತೆ ಲೇಖನಗಳನ್ನು ಆಹ್ವಾನಿಸುತ್ತದೆ. ಆಸಕ್ತರು ಪತ್ರಿಕೆಯನ್ನು ಸಂಪರ್ಕಿಸಬೇಕಾಗಿ ವಿನಂತಿ.

ತಾವು ದಯಮಾಡಿ ಜನಪದ ವಿಚಾರದ ವಾರ್ಷಿಕ ಚಂದಾ 100/- ರೂ. ಮನಿಆರ್ಡರ್ ಮೂಲಕ ಕಳುಹಿಸಿ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

-ಪ್ರಕಾಶಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ (-ಸಂಪಾದಕರು)

KA-SKMND-470-2003-05
Regd. no. KAR/KAN/2000/3820

ತೆರೆದ–ಅಂಚೆ

TO,

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, ®. Melkote. Dist- mandya – 571431
Phone : 08236 – 298754 e-mail : janapada@yahoo.com